ಡಿಸೆಂಬರ್ - 1

ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು. -ಮತ್ತಾಯ 22:39

ನಿನ್ನ ನೆರೆಯವನು ತನ್ನ ಬುದ್ಧಿ ಮತ್ತು ನಾಲಿಗೆಯನ್ನು ನಿನ್ನ ವಿರುದ್ಧವಾಗಿ ಆರೋಪಿಸುವದಕ್ಕೆ, ಕೆಟ್ಟ ಕೆಟ್ಟ ಮಾತುಗಳನ್ನಾಡುವದಕ್ಕೆ ಮತ್ತು ನಿನ್ನನ್ನು ನಿಂದಿಸಲಿಕ್ಕೆ ಉಪಯೋಗಿಸಬಾರದು ಎಂಬದಾಗಿ ನೀನು ಇಷ್ಟಪಡುವುದು ಸಹಜ. ಅದರಂತೆಯೇ ನೀನೂ ಸಹ ನಿನ್ನ ನೆರೆಯವನನ್ನು ನಿಂದಿಸಬಾರದು. ಕರ್ತನ ಆಜ್ಞೆ ಏನೆಂದರೆ, ಆತನ ಒಡಂಬಡಿಕೆಯ ಅಡಿಯಲ್ಲಿ ಬರುವ ಎಲ್ಲರೂ ತನ್ನ ನೆರೆಯವನ ಬಗ್ಗೆ ಅನುಮಾನಪಟ್ಟು ನಿಂದಿಸಬಾರದು. ಆಧಾರವಿಲ್ಲದ ಅನುಮಾನ ಆತನ ತಿಳುವಳಿಕೆಯನ್ನು ಮೀರಿ ಸಾಂದರ್ಭಿಕ ವಿಷಯಗಳ ಮೂಲಕ ಅವನಿಗೆ ತಿಳಿದುಬಂದರೂ ತನ್ನಲ್ಲಿರುವ ನೂತನ ಮನಸ್ಸು ಅದರ ಉದಾರ ಮನೋಭಾವದಿಂದಾಗಿ ಆ ಅನುಮಾನ ತಪ್ಪಾಗಿ ಅಥವ ಸರಿಯಾಗಿ ಕೇಳಿಸಿಕೊಳ್ಳಲಾರದೆ ಹೋಗಿರುವದರಿಂದಲೂ ನಿನ್ನ ನೆರೆಯವನಿಗೆ ಈ ವಿಷಯದ ಬಗ್ಗೆ ಅನುಮಾನಪಡುವ ಅವಕಾಶವನ್ನು ಕೊಡಬೇಕು-Z ’99 72 (ಖ 2442).

*    *    *

ಡಿಸೆಂಬರ್ - 2

ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು............... -ಅ.ಕೃ. 22:16

ತಮ್ಮ ಪ್ರಭಾವದಿಂದ ಇತರರನ್ನು ಸರಿಯಾದ ಮಾರ್ಗಕ್ಕೆ ತರಲು ಉದ್ದೇಶಿಸುವವರೆಲ್ಲರೂ ಅನುಸರಿಸಬೇಕಾದ ಒಂದು ಸೂಕ್ತ ವಿಷಯವು ಈ ಹೇಳಿಕೆಯಲ್ಲಿ ನೇರವಾಗಿ ಅಡಗಿದೆ. ಇವರನ್ನು ಪರಿಪೂರ್ಣತೆಯಿಂದ ತುಂಬಿದ ವಿಧೇಯತೆಗೆ ಪ್ರೇರೇಪಿಸಿ ಸತ್ಯಕ್ಕೂ ಮತ್ತು ಕರ್ತನಿಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಥಿಸಿಕೊಳ್ಳಲು ಒತ್ತಾಯ ಮಾಡುವುದು ಅವಶ್ಯ. ಅವರು ಸತ್ಯದ ಪರಿಜ್ಞಾನಕ್ಕೆ ಬಂದು ಕರ್ತನನ್ನು ನಂಬಿಕೆಯ ಕಣ್ಣುಗಳಿಂದ ನೋಡಿ ಆತನ ಧ್ವನಿಯನ್ನು ಕೇಳಿದ ಮೇಲೂ ಆತನಿಗೆ ಅವಿಧೇಯರಾಗಿರುವವರಿಗೆ, ಸ್ವಲ್ಪ ಸಮಯದ ನಂತರ ಲೋಕದ ಆಶೆಗಳು, ಶಾರೀರಿಕ ವ್ಯಾಮೋಹ ಮುಂತಾದ ಶೋಧನೆಗಳು ಬರುವುದು ಸಹಜ. ಹಾಗೂ ಸೈತಾನನು ಅಂಥವರಿಗೆ ಹೇಳುವದೇನಂದರೆ, ನೀನು ವಿಪರೀತವಾಗಿ ಸತ್ಯವನ್ನು ಏಕೆ ಅನುಸರಿಸುತ್ತೀ? ನೀನು ಸಾಧಾರಣವಾಗಿ ಅನುಸರಿಸಿದರೆ ಸಾಕು. ಏಕೆ ನೀನು ಕರ್ತನಿಗೆ ಪೂರ್ಣ ಪ್ರಮಾಣದಲ್ಲಿ ಪ್ರತಿಷ್ಠಿಸಿಕೊಂಡಿರುವೆ, ಹಾಗೂ ನಿನ್ನ ನೆರೆಹೊರೆಯವರು ಮತ್ತು ಸ್ನೇಹಿತರು ನಿನ್ನ ವಿಷಯದಲ್ಲಿ ಬೇರೆಯ ರೀತಿಯಲ್ಲಿ ತಿಳಿಯುವರು, ಹಾಗೂ ನಿನ್ನ ನಿರೀಕ್ಷೆ, ಆಕಾಂಕ್ಷೆಗಳಿಂದ ನೀನು ದೂರವಾಗುವುದಲ್ಲದೆ, ನಿನ್ನ ಸ್ನೇಹಿತರೆಲ್ಲರೂ ವೈರಿಗಳಾಗುವರು ಮತ್ತು ಇದರಿಂದ ನೀನು ತುಂಬಲಾರದ ನಷ್ಟವನ್ನು ಅನುಭವಿಸುವಿ. ಆದುದರಿಂದ, ನಿಧಾನವಾಗಿ ಸಾಗು ಎಂಬ ಸಲಹೆ ಸೈತಾನನಿಂದ ಬರುವದು-Z ’01 186 (ಖ 2823).

*    *    *

ಡಿಸೆಂಬರ್ - 3

ನೀನು ನನ್ನ ಸಹನ ವಾಕ್ಯವನ್ನು ಕಾಪಾಡಿದ್ದರಿಂದ, ಭೂನಿವಾಸಿಗಳನ್ನು ಪರೀಕ್ಷಿಸುವದಕ್ಕಾಗಿ ಲೋಕದ ಮೇಲೆಲ್ಲಾ ಬರುವದಕ್ಕಿರುವ ಶೋಧನೆಯ ಸಮಯದಲ್ಲಿ ನಿನ್ನನ್ನು ತಪ್ಪಿಸಿ ಕಾಪಾಡುವೆನು.

-ಪ್ರಕಟನೆ 3:10

ಈಗಿನ ಲವೋದಿಕಿಯ ಹಂತದ ಕಾಲದಲ್ಲಿ ದೀರ್ಘಶಾಂತಿಯುಳ್ಳವರಾಗಿ ಓಡುತ್ತಿರುವ ದೇವ ಜನರಿಗೆ ಇದು ಒಂದು ವಿಶೇಷ ಬಹುಮಾನವಾಗಿದೆ. ನಾವು ಈಗ ಬಂದೊದಗಿದ ಶೋಧನೆಯಿಂದ ತಪ್ಪಿಸಿಕೊಳ್ಳುವ ಸುಯೋಗವನ್ನು ಪಡೆಯದೇ ಇದ್ದರೂ ಕರ್ತನ ಪ್ರತ್ಯಕ್ಷತೆಯ ಕಾಲದಲ್ಲಿ ಇರುವದರಿಂದ ಈ ಶೋಧನೆಯಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಲು ದೇವರ ಆಶೀರ್ವಾದವನ್ನು ಹೊಂದುವ ಭಾಗ್ಯವನ್ನು ಬೇಡುವರಾಗಿದ್ದೇವೆ. ನಾವು ಆತನ ಅನ್ಯೋನ್ಯತೆ, ಆತನ ಆದೇಶ, ಕಾಲಕಾಲಕ್ಕೆ ಒದಗಿಸುವ ಆತ್ಮೀಕ ಆಹಾರವನ್ನು ಕೊಡುವ ಕರ್ತನ ಆಶೀರ್ವಾದಕ್ಕೆ ತವಕಪಡುವವರಾಗಿದ್ದೇವೆ. ಇಂಥಹ ಸ್ಥಿತಿ ಮತ್ತು ಆಶೀರ್ವಾದ ಹಿಂದಿನ ಯುಗಗಳಲ್ಲಿದ್ದಂಥ ನಂಬಿಗಸ್ತ ದೇವಜನರಾರಿಗೂ ಇರಲಿಲ್ಲ. ಈ ಒಂದು ದೊಡ್ಡ ಆಶೀರ್ವಾದವನ್ನು ನಾವು ನಿರೀಕ್ಷಿಸುವರಾಗಿದ್ದರೆ, ಲೋಕಕ್ಕೂ ಹಾಗೂ ನಮಗೂ ಈಗ ಒದಗಿಬರಲಿರುವ ಈ ಭಯಂಕರ ಪರಿಶೋಧನೆಗೆ ಸರಿಸಾಟಿಯಾಗಲಾರದು. ಇಂಥಹ ಸಮಯದಲ್ಲೇ ದೀರ್ಘಶಾಂತಿಯಿಂದಿರುವದು ಹೆಚ್ಚಿನ ಅವಶ್ಯಕತೆಯಾಗಿದೆ-Z '01 118 (ಖ 2790)

***    ***    ***

ಡಿಸೆಂಬರ್ - 4

ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮ ವರವನ್ನು ಕೊಡುವನಲ್ಲವೇ ಅಂದನು. -ಲೂಕ 11:13

ಎಲ್ಲಾ ಪ್ರತಿಷ್ಠೆಪಡಿಸಿಕೊಂಡಿರುವ ದೇವ ಜನರು ತಮ್ಮ ಜೀವನದ ಮುಖ್ಯ ಗುರಿಯನ್ನು ತಲುಪಿರುವುದಾದರೆ, ಅವರೆಲ್ಲರ ಪ್ರಾರ್ಥನೆಗಳ ಭಾರವು, ಕರ್ತನ ಪವಿತ್ರತೆಯುಳ್ಳ ಆತ್ಮ, ಸತ್ಯದ ಆತ್ಮ, ಕ್ರಿಸ್ತನ ಆತ್ಮ, ಸ್ವಸ್ಥ ಚಿತ್ತದ ಆತ್ಮ ಇವೆಲ್ಲವುಗಳ ಹೆಚ್ಚಿನ ಪರಿಣಾಮವನ್ನು ಬೇಡಿ ಹೊಂದುವ ಆಶೀರ್ವಾದವು ಎಷ್ಟೋ ಸಂತಸವುಳ್ಳದ್ದಾಗಿರುತ್ತದೆ. ಹಾಗಾದರೆ, ಬೆಳಗಾಗುವ ತನಕ ಕರ್ತನ ಜೊತೆಯಲ್ಲಿ ಹೋರಾಡುವದಾದರೆ ಆತನು ಅವರ ಇಚ್ಛೆಯಂತೆ ಆಶೀರ್ವದಿಸುವನು. ಕರ್ತನು ತನ್ನನ್ನು ದೇವ ಜನರಿಗೆ ಪ್ರಕಟಮಾಡಿಕೊಂಡಿರುವ ಉದ್ದೇಶವು ಅವರಿಗೆ ಈ ಆಶೀರ್ವಾದÀವನ್ನು ಅನುಗ್ರಹಿಸುವದಾಗಿದೆ. ಇಷ್ಟಾದರೂ ಕರ್ತನ ಜನರು ಈ ವಿಷಯವನ್ನು ಮೆಚ್ಚಿ ಅದನ್ನು ಅತ್ಯಾಸಕ್ತಿಯಿಂದ ಆಶಿಸುವವರೆಗೂ ಆಶೀರ್ವಾದವನ್ನು ತಡೆಹಿಡಿದಿರುವನು-Z '01 271 (ಖ 2864).

*   *   *

ಡಿಸೆಂಬರ್ - 5

ಯೆಹೋವನನ್ನು ಸೇವಿಸುವವರು ನಿಮಗೆ ಸರಿಕಾಣದಿದ್ದರೆ ಯಾರನ್ನು ಸೇವಿಸಬೇಕೆಂದಿದ್ದೀರಿ? ಈ ಹೊತ್ತೇ ಆರಿಸಿಕೊಳ್ಳಿರಿ ......................... ನಾನೂ ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು ಅಂದನು. -ಯೆಹೋಶುವ 24:15

ಇತರರು ತಮ್ಮ ಇಚ್ಛೆಯಂತೆ ತಮಗೆ ಬೇಕಾದವರನ್ನು ಸೇವಿಸಲಿ. ನಾವಾದರೋ ನಮ್ಮ ಕರ್ತನು ಕೃಪಾಪೂರ್ಣನೆಂಬುದನ್ನು ಸವಿದು ನೋಡಿರುವದರಿಂದಲೂ, ಆತನ ವಾಕ್ಯದ ಮೂಲಕ ಆತನನ್ನು ತಿಳಿದಿರುವದರಿಂದಲೂ, ಆತನ ಅನುಗ್ರಹ, ಪರಾಮರಿಕೆ ಮತ್ತು ಆತನ ಆತ್ಮದ ಪ್ರಭಾವದಿಂದ ನಮ್ಮ ನೂತನ ಜೀವಿತದಲ್ಲಿ ಶಕ್ತಿಯನ್ನು ಪಡೆದಿರುವದರಿಂದಲೂ, ನಾವು ಬೇರೇನೂ ಮಾಡದೆ ನಮ್ಮ ದೇವರನ್ನು ಹೃದಯಪೂರ್ವಕವಾಗಿಯೂ, ದೃಢ ವಿಶ್ವಾಸದಿಂದಲೂ ಸೇವಿಸುತ್ತೇವೆ. ನಾವು ಆತನಲ್ಲಿ ಸಂಶಯವಿಲ್ಲದ ಆತ್ಮ ವಿಶ್ವಾಸವಿಟ್ಟಿರುವದರಿಂದ ಆತನು ನಮಗೆ ತೋರಿಸುವ ಮಾರ್ಗದಲ್ಲಿ ಸಂತೋಷದಿಂದ ನಡೆಯುತ್ತೇವೆ. ಯಾಕಂದರೆ, ಆತನು ನಮ್ಮನ್ನು ಕೈಹಿಡಿದು ನಡೆಸುವವನಾಗಿದ್ದಾನೆ. ಹೀಗೆ ನಾವು ನಮ್ಮ ಪ್ರಾಮಾಣಿಕವಾದ ಕುರುಬನನ್ನು ಹಿಂಬಾಲಿಸುವದರಿಂದ ಕೊನೆಯಲ್ಲಿ ದೇವರ ರಾಜ್ಯದ ಅಂಕಿತದಲ್ಲಿರುತ್ತೇವೆ. ಈ ಎಲ್ಲಾ ವಾಗ್ದಾನಗಳಿಂದ ಪುಳಕಿತರಾಗಿ ಸಂತೋಷ, ನೆಮ್ಮದಿ ಹಾಗೂ ಹೃದಯವನ್ನು ತುಂಬುವ ಆಶೀರ್ವಾದದಿಂದ ನಾವು ಯಾತ್ರಾರ್ಥಿಗಳಾಗಿ ದೇವರ ರಾಜ್ಯವನ್ನು ಸೇರುತ್ತೇವೆ- Z ’01 284 (ಖ 2872).

*     *     *

ಡಿಸೆಂಬರ್ - 6

ಆತ್ಮವನ್ನು ಸ್ವಾಧೀನಮಾಡಿಕೊಳ್ಳದವನು, ಗೋಡೆ ಬಿದ್ದ ಹಾಳೂರಿಗೆ ಸಮಾನ.....

-ಜ್ಞಾನೋಕ್ತಿ 25:28

ನಮ್ಮ ಸ್ವಾರ್ಥದ ವಿರುದ್ಧ ಹೋರಾಡುವದು ಒಂದು ಮಹತ್ತರವಾದ ಹೋರಾಟವಾಗಿದೆ. ಈ ಹೋರಾಟದ ವಿಷಯದಲ್ಲಿ ನಮಗೆ ಕರ್ತನು ಕೊಟ್ಟ ವಾಕ್ಯವೇನೆಂದರೆ, “ತನ್ನನ್ನು ಆಳುವವನು (ತನ್ನ ಮನಸ್ಸು ಅಥವಾ ಚಿತ್ತ) ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಠ” (ಜ್ಞಾನೋಕ್ತಿ 16:32). ಏಕೆಂದರೆ, ಅವನು ಈ ಹೋರಾಟದ ಬಗ್ಗೆ ತಿಳುವಳಿಕೆಯನ್ನು ಹೊಂದಿದವನಾಗಿ, ತನ್ನನ್ನು ಸರಿಯಾಗಿ ನಿಯಂತ್ರಿಸಿಕೊಳ್ಳುವ ಹೋರಾಟ ಮಾಡುವನು. ಹೀಗೆ ತನ್ನಲ್ಲಿರುವ ಸ್ವಾರ್ಥತೆ ಮತ್ತು ಪಾಪದ ವಿರುದ್ಧ ಹೋರಾಟ ಮಾಡುತ್ತಾ ಅನುಭವವನ್ನು ಪಡೆದ ಮೇಲೆ ತನ್ನ ಕಣ್ಣಲ್ಲಿರುವ ತೊಲೆಯನ್ನು ತೆಗೆಯಲು ಶಕ್ತನಾಗುವನು. ಅಂದರೆ, ಶರೀರದಲ್ಲಿನ ಕೋಪ, ಹೊಟ್ಟೆಕಿಚ್ಚು, ದ್ವೇಷ, ಅಸೂಯೆಯನ್ನು ಸ್ವಾಧೀನದಲ್ಲಿಟ್ಟವನು ಇಂತಹ ಕಠಿಣವಾದ ಯುದ್ಧದಿಂದ ಅನುಭವವನ್ನು ಪಡೆದವನಾಗಿದ್ದಾನೆ. ಸಹೋದರರಿಗೆ ಸಹಾಯ ಮಾಡಲು ಸಿದ್ಧನಾಗಿರುವವನು, ತನ್ನ ನೆರೆಯವರಿಗೆ ಅವರ ಕಷ್ಟದಲ್ಲಿ ಸಹಾಯ ಮಾಡುತ್ತಾ, ಅವರಿಗೆ ಹತ್ತಿರುವ ಪಾಪ ಮತ್ತು ಬಲಹೀನತೆಯಿಂದ ಅವರನ್ನು ಪಾರು ಮಾಡುವ ಸಾಧ್ಯತೆಯನ್ನು ಹೊಂದುತ್ತಾನೆ-Z ’01 295 (ಖ 2877).

*     *     *

ಡಿಸೆಂಬರ್ - 7

ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ. 1ಪೇತ್ರ 2:23

ಯೇಸು ಕ್ರಿಸ್ತನ ವೈರಿಗಳು ಆತನಲ್ಲಿ ತಪ್ಪು ಕಂಡುಹಿಡಿಯಲು ಪ್ರಯತ್ನಿಸಿದರು ಹಾಗೂ ಆತನನ್ನು ಬೈಯುವುದಕ್ಕೂ ಮತ್ತು ಆತನ ವಿರುದ್ಧವಾಗಿ ಕೆಟ್ಟ ಮಾತುಗಳನ್ನಾಡಲು ಕಾಯುತ್ತಿದ್ದರು. ಕೆಲವು ವೇಳೆ ಆತನ ವೈರಿಗಳು ಸಾಧಿಸಬಹುದು ಎಂಬ ಅಭಿಪ್ರಾಯದ ಸನಿಹದಲ್ಲಿರುವವರಾಗಿದ್ದರು. ಆದರೂ ಕ್ರಿಸ್ತನು ಪ್ರತಿಯಾಗಿ ಅವರನ್ನು ಬೈಯದೆ ಮತ್ತು ಅವರ ವಿರುದ್ಧವಾಗಿ ಕೆಟ್ಟ ಮಾತನ್ನಾಡದೆ ಸುಮ್ಮನಿದ್ದನು ಎನ್ನುವದು ಸರಿಯಲ್ಲ. ಏಕೆಂದರೆ, ಆತನು ದೈವ ಚಿತ್ತಕ್ಕೆ ಸಂಪೂರ್ಣವಾಗಿ ಶರಣಾಗತನಾದುದರಿಂದ, ಜನರಿಂದ ಬಂದ ಕೆಟ್ಟ ನಿಂದನೆ, ಬೈಗಳನ್ನು ದೀನ ಸ್ವಭಾವವುಳ್ಳವನಾಗಿ, ಶಾಂತ ಚಿತ್ತದಿಂದ ಅವುಗಳನ್ನು ಸಹಿಸಿಕೊಂಡನು. ಈ ಕಾರಣಕ್ಕಾಗಿಯೇ ಆತನು ಕರೆಯಲ್ಪಟ್ಟವನಾಗಿದ್ದು, ಇವೆಲ್ಲವನ್ನು ಶಾಂತಚಿತ್ತದಿಂದ ಸಹಿಸಿಕೊಂಡು, ದೇವರಿಗೆ ನಂಬಿಗಸ್ತನಾಗಿ ಶಿಕ್ಷಣ ಹೊಂದಿದವನಾಗಿ ರುಜುಪಡಿಸಿ ತನ್ನಲ್ಲಿರುವ ದೈವಿಕ ಗುಣಗಳನ್ನು ಅಭಿವೃದ್ಧಿಪಡಿಸಿಕೊಂಡು, ಆ ಮುಖಾಂತರ ಈ ಎಲ್ಲಾ ಗುಣಗಳಿಂದ ಜನರ ಕುರುಡುತನ ಮತ್ತು ಅವರ ಅಜ್ಞಾನದ ನಿಮಿತ್ತ ಅವರಲ್ಲಿ ಸಹಾನುಭೂತಿಯುಳ್ಳವನಾಗಿ ಅವರಿಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದನು-Z '01, 298 (ಖ 2877).

*    *    *

ಡಿಸೆಂಬರ್ - 8

ಲೋಕವು ನಿಮ್ಮ ಮೇಲೆ ದ್ವೇಷ ಮಾಡುವದಾದರೆ, ಅದು ಮೊದಲು ನನ್ನ ಮೇಲೆ ದ್ವೇಷ ಮಾಡಿತೆಂದು ತಿಳುಕೊಳ್ಳಿರಿ...... -ಯೋಹಾನ 15:18

ಲೋಕವು ನಿಷ್ಕಾರಣವಾಗಿ ನಮ್ಮ ಕರ್ತನನ್ನು ದ್ವೇಷಿಸಿದಂತೆ ನಮ್ಮ ವಿಷಯದಲ್ಲಿಯೂ ದ್ವೇಷಿಸುವದು ಹಾಗೂ ದ್ವೇಷ, ಅಸೂಯೆ, ವೈರತ್ವ ಮತ್ತು ಕೊಲೆಗೆ ಕಾರಣವಿಲ್ಲದಿದ್ದರೂ ನಮಗೆ ವಿರುದ್ಧವಾಗಿ ನಮ್ಮ ಮೇಲೆ ದ್ವೇಷ ಕಾರುವುದಾದರೆ ನಾವು ಆದಷ್ಟುಮಟ್ಟಿಗೆ ನಮ್ಮ ಜೀವನ ಶುದ್ಧವಾಗಿದೆ ಎಂತಲೂ, ನಮ್ಮ ಯೋಜನೆಗಳು, ನಮ್ಮ ಮಾತುಗಳು ಮತ್ತು ಕೃತಿಗಳ ಮೂಲಕ ನಮ್ಮ ಕರ್ತನ ನಾಮವನ್ನು ಕೊಂಡಾಡುವವರಾಗಿ, ಪ್ರೀತಿಯನ್ನು ಎಲ್ಲಾ ಮನುಷ್ಯರ ಮೇಲೆ ತೋರಿಸುತ್ತಾ ಅದರಲ್ಲೂ ಪ್ರಾಮುಖ್ಯವಾಗಿ ನಂಬಿಗಸ್ತ ಮನೆವಾರ್ತೆಯ ಸಹೋದರರ ಮೇಲೆ ತೋರಿಸುವವರಾಗಿದ್ದೇವೆ ಎಂಬದು ಖಚಿತವಾಗುವದು. ನೂತನ ಆಕಾಶಮಂಡಲ, ನೂತನ ಭೂ ಮಂಡಲ ಉದಯವಾದಾಗ, ಈಗ ಸೈತಾನನಿಂದ ಮಂಕು ಮಾಡಲ್ಪಟ್ಟು ಕುರುಡರಾಗಿದ್ದು ನಮ್ಮನ್ನು ದ್ವೇಷ ಮಾಡಿದವರು ದೇವರಿಂದ ಅಭಿಷೇಕಿಸಲ್ಪಟ್ಟವರ ಮುಂದೆ ಮೊಣಕಾಲೂರಿ ಅಡ್ಡಬೀಳುವರು. ಆಗ ನಾವು ಅವರನ್ನು ಮೇಲೆತ್ತಿ ಆಶೀರ್ವದಿಸಿ ಅವರನ್ನು ಪ್ರೋತ್ಸಾಹಪಡಿಸಿ ಅವರು ಕಳಕೊಂಡಿರುವ ದೇವರ ಸ್ವರೂಪ ಹಾಗೂ ಹೋಲಿಕೆಯನ್ನು ಪಡೆಯಲು ಅವರಿಗೆ ಸಹಾಯಮಾಡುತ್ತೇವೆ-Z '01, 300 (ಖ 2880).

*    *    *

ಡಿಸೆಂಬರ್ - 9

ಕಷ್ಟವನ್ನು ಸಹಿಸಿಕೊಳ್ಳುವವನು ಧನ್ಯನು. ಅವನು ಪರಿಶೋಧಿತನಾದ ಮೇಲೆ ಜೀವವೆಂಬ ಜಯಮಾಲೆಯನ್ನು ಹೊಂದುವನು. ಸ್ವಾಮಿಯು ತನ್ನನ್ನು ಪ್ರೀತಿಸುವವರಿಗೆ ಇದನ್ನು ವಾಗ್ದಾನ ಮಾಡಿದ್ದಾನೆ.    -ಯಾಕೋಬ 1:12

ಈ ವಾಸ್ತವ ಸಂಗತಿ ಸದಾ ನಮ್ಮ ಜ್ಞಾನದಲ್ಲಿರಬೇಕಾದರೆ, ನಮಗೊದಗುವ ಪ್ರತಿಯೊಂದು ಪರೀಕ್ಷೆ, ಪ್ರತಿಯೊಂದು ಹಿಂಸೆ, ಜೀವಿನದ ಪ್ರತಿಯೊಂದು ಕಷ್ಟ ಇವೆಲ್ಲವು ದೇವರೊಂದಿಗೆ ಯಜ್ಞದ ಮೂಲಕ ಒಡಂಬಡಿಕೆ ಮಾಡಿಕೊಂಡಿರುವ ನಮ್ಮ ಜೀವಿತದಲ್ಲಿ ಬರುವದಕ್ಕೆ ಕರ್ತನು ಅವಕಾಶ ಕೊಡುತ್ತಾನೆ. ಇದರಿಂದ ನಾವು ಕರ್ತನನ್ನು ಪ್ರೀತಿಸುತ್ತೇವೆಯೋ ಮತ್ತು ನಮ್ಮ ಗುರಿ, ಗುಣಗಳು ನೀತಿಯಲ್ಲಿ ಬೇರೂರಿ ಪ್ರೀತಿಯಲ್ಲಿ ನೆಲೆಯಾಗಿವೆಯೋ? ಇಲ್ಲವೋ? ಎಂಬುದನ್ನು ಪರೀಕ್ಷಿಸಲಿಕ್ಕೆ ಇವುಗಳು ಕರ್ತನ ಜನರಿಗೆ ಸಂಭವಿಸುತ್ತವೆ. ಹಾಗೂ ಅವರು ಪ್ರೀತಿಯಿಂದ ಕಟ್ಟಲ್ಪಟ್ಟಿರುವುದರಿಂದಲೂ ಅವರಿಗೆ ಸಂಭವಿಸುವ ಪರೀಕ್ಷೆಗಳು, ಸಂಕಷ್ಟಗಳು, ಪರಿಶೋಧನೆಗಳು ಹೊಸ ರೀತಿಯಲ್ಲಿ ಕಾಣುವದರಿಂದ ಅವರು ಒಂದು ಒಳ್ಳೆಯ ಹೋರಾಟವನ್ನು ಮಾಡಿ ಜಯಶಾಲಿಗಳಾಗಲು ಇವುಗಳು ಸಹಾಯಕವಾಗಿರುವವು. ನಾವು ಹೇಳುವದೇನಂದರೆ, ನಮಗೊದಗುವ ಈ ಚಿಕ್ಕ ಪರೀಕ್ಷೆಗಳಿಂದಾಗಿ ಕರ್ತನು, ನಾವು ಆತನಲ್ಲಿಟ್ಟಿರುವ ಪ್ರೀತಿ ಮತ್ತು ಭಯ, ಭಕ್ತಿಯನ್ನು ರುಜುವಾತು ಮಾಡುವದಾದರೆ, ಈ ಪರೀಕ್ಷೆಗಳು ಎಷ್ಟೇ ಚಿಕ್ಕವುಗಳಾಗಿದ್ದರೂ ಅಥವ ದೊಡ್ಡ ಪ್ರಮಾಣದವುಗಳಾಗಿದ್ದರೂ ಅವುಗಳು ನಮಗೆ ದೊರಕಿರುವ ಹಿತಕರವಾದ ಅವಕಾಶಗಳೆಂದು ಪರಿಗಣಿಸಿ, ಎಚ್ಚರಿಕೆಯಿಂದಲೂ, ಶ್ರದ್ಧೆಯಿಂದಲೂ ಅನುಭವಿಸಿ ನಾವು ಕರ್ತನಲ್ಲಿ ಪ್ರೀತಿ, ಭಯ, ಭಕ್ತಿ ಮತ್ತು ಆತನ ಕಾರ್ಯಗಳಲ್ಲಿ ಆಸಕ್ತಿ ಇಟ್ಟಿದ್ದೇವೆ ಎಂಬದನ್ನು ನಿರೂಪಿಸುವೆವು-Z ’98, 41 (ಖ 2257).

*    *    *

ಡಿಸೆಂಬರ್ - 10

ನನ್ನನ್ನು ಸನ್ಮಾನಿಸುವವರನ್ನು ಸನ್ಮಾನಿಸುವೆನು.    -1ಸಮುವೇಲ 2:30

ಕರ್ತನು ತನ್ನ ಸೇವೆಯ ಯಾವುದೇ ಶಾಖೆಯ ಬಾಗಿಲನ್ನು ತೆರೆದು ನಮ್ಮನ್ನು ಆಹ್ವಾನಿಸಿದರೂ ನಾವು ತಪ್ಪದೆ ಸಿದ್ಧರಾಗಿದ್ದು, ನಮ್ಮ ಶಕ್ತ್ಯಾನುಸಾರ ಸೇವೆ ಮಾಡಲು ಉತ್ಸಾಹಭರಿತರಾಗಿ, ಆತನು ನಮ್ಮನ್ನು ಯಾವ ಕಾರಣಕ್ಕಾಗಿ ಕರೆದಿರುವನೋ ಅದಕ್ಕಾಗಿ ನಾವು ಕರೆದಿರುವ ಬಾಗಿಲಿನಿಂದ ಒಳಗೆ ಪ್ರವೇಶಿಸಬೇಕು. ಇದು ನಮ್ಮ ಒಪ್ಪಿಗೆಯನ್ನು ಅನುಮೋದಿಸುವ ಒಂದು ಶರತ್ತು. ಒಂದು ವೇಳೆ ನಾವು ಸೋಮಾರಿಗಳಾಗಿ ದೊರಕಿರುವ ಅವಕಾಶಗಳನ್ನು ತಾತ್ಸಾರ ಮಾಡುವದಾದರೆ, ಕರ್ತನು ಅದನ್ನು ನಮ್ಮಿಂದ ತೆಗೆದು ಇತರರಿಗೆ ಕೊಡುವನು. ಆತನು ತನ್ನ ಸೇವೆಗಾಗಿ ಯಾರನ್ನಾದರೂ ಉಪಯೋಗಿಸಲು ಸಮರ್ಥನಾಗಿದ್ದಾನೆ; ಹಾಗೆ ಮಾಡುವಾಗ ಕರ್ತನು ತಾನು ಕರೆದಿದ್ದ ವ್ಯಕ್ತಿಯು ಸ್ವತಂತ್ರವಾಗಿ ಯೋಚಿಸುವ ವಿಷಯಕ್ಕೆ ಅಡ್ಡಿಪಡಿಸುವದಾಗಲಿ ಅಥವ ತಳ್ಳಿಹಾಕುವದನ್ನಾಗಲಿ ಮಾಡುವದಿಲ್ಲ. ಹೀಗಿರುವಲ್ಲಿ ನಾವು

ದೇವರ ಜೊತೆ ಕೆಲಸದವರಾಗಿದ್ದೇವೆ ಎಂಬ ವಿಷಯದಲ್ಲಿ ಸಂತೋಷಪಡೋಣ ಮತ್ತು ದೇವರು ಅನುಗ್ರಹಿಸಿರುವ ಈ ಅವಕಾಶಕ್ಕಾಗಿ ಸಂತೋಷಿಸಿ, ಅದರಲ್ಲೂ ನಮ್ಮ ಕರ್ತನು ಹಾಗೂ ನಾಯಕನು ಆಗಿರುವ ಕ್ರಿಸ್ತ ಯೇಸುವು ನಡೆಸುತ್ತಿರುವ ಈ ಮಹಾಸೇವೆಯಲ್ಲಿ ಭಾಗಿಗಳಾಗಿ ಆತನ ಅನ್ಯೋನ್ಯತೆಯಲ್ಲಿ ಇರಲು ನಮ್ಮನ್ನು ಕರೆದಿರುವದಕ್ಕಾಗಿ ಸಂತೋಷಪಡೋಣ-Z '01, 318 (ಖ 2888).

*     *     *

ಡಿಸೆಂಬರ್ - 11

ಕಂದಾ ನನ್ನ ಕಡೆಗೆ ಮನಸ್ಸುಕೊಡು, ನಿನ್ನ ಕಣ್ಣುಗಳು ನನ್ನ ಮಾರ್ಗದಲ್ಲಿ ಆನಂದಿಸಲಿ.

ಜ್ಞಾನೋಕ್ತಿ 23:26

ದೇವರಿಗೆ ಸಮರ್ಪಿಸಿಕೊಂಡ, ಹೃದಯ ಮತ್ತು ಚಿತ್ತ ಇವೆರಡೂ ದೇವರ ಚಿತ್ತವೇನೆಂದು ತಿಳಿಯಲು ಪ್ರಯತ್ನಿಸುವವು. ದೈವ ಯೋಚನೆಯನ್ನು ಅರಿತು ಅದಕ್ಕೆ ಮಾತಿನಿಂದಲೂ, ಕೃತಿಯಿಂದಲೂ ವಿಧೇಯತೆಯನ್ನು ತೋರಿಸುವವು; ನೂತನ ಮನಸ್ಸು ಒಂದು ಸಮತೋಲನಕ್ಕೆ ತಲುಪಿದ್ದೇ ಆದರೆ, ಅದೇ ಸಮತೋಲನದಲ್ಲಿ ಪ್ರತಿಯೊಂದು ವಿಷಯದಲ್ಲೂ ನೂತನ ಜೀವಿತ ಪ್ರಾರಂಭವಾಗುವದು. ಅಂದರೆ, ಆಕಾಂಕ್ಷೆ, ನಿರೀಕ್ಷೆ, ಭಾವನೆಗಳನ್ನು ಪಡೆಯಲು ಪ್ರಯತ್ನಿಸುವದು. ಈ ಉದ್ದೇಶಕ್ಕಾಗಿಯೇ ನಂಬಿಗಸ್ತರಿಗೆ ದೈವ ಯೋಜನೆ ಮತ್ತು ದೈವ ಚಿತ್ತ ಪ್ರಕಟವಾಗಿರುವದು. ಹೀಗೆ ದೈವ ಜ್ಞಾನದಲ್ಲಿ ಬೆಳೆಯುತ್ತಾ, ಅವುಗಳ ಬಗ್ಗೆ ಯೋಚಿಸುತ್ತಾ ಮನಸ್ಸನ್ನು ದೈವ ಯೋಜನೆಯಿಂದಲೂ, ದೇವರ ಚಿತ್ತದಿಂದಲೂ ತುಂಬಿಸುವದರಿಂದ ಅದರ ಪರಿವರ್ತನೆಯ ಪ್ರಭಾವ ಜೀವನದ ಎಲ್ಲಾ ಹಂತಗಳಲ್ಲೂ ಪ್ರಸರಿಸುವದು-Z '01, 324 (ಖ 2890).

*     *     *

ಡಿಸೆಂಬರ್ - 12

ಅವನು ತನ್ನ ಒಳಗಿನ ಯೋಜನೆಯಂತೆಯೇ ಇದ್ದಾನೆ.                    -ಜ್ಞಾನೋಕ್ತಿ 23:7

ಕರ್ತನಿಗೆ ಪ್ರತಿಷ್ಠೆಪಡಿಸಿಕೊಂಡಿರುವ ದೇವ ಜನರು ಎಚ್ಚರಿಕೆಯಿಂದಿದ್ದು ತಮ್ಮಲ್ಲಿರುವ ಅಶುದ್ಧವಾದವುಗಳನ್ನು ತೆಗೆದುಹಾಕಿ, ಅವುಗಳು ಪುನಃ ತಮ್ಮ ಹೃದಯ ಮತ್ತು ಮನಸ್ಸಿನೊಳಗೆ ನುಸುಳದಂತೆ ನೋಡಿಕೊಳ್ಳುವದು ಅವಶ್ಯ. ಅವು ಪುನಃ ನಮ್ಮ ಮನಸ್ಸಿನಲ್ಲಿ, ಹೃದಯದಲ್ಲಿ ನುಸುಳಿದ್ದೇ ಆದರೆ, ಅವು ನಮ್ಮನ್ನು ಹೆಚ್ಚಾಗಿಯೋ ಅಥವಾ ಕಡಿಮೆಯಾಗಿಯೋ ಕೆಡೆಸುವದಂತೂ ನಿಜ. ಯಾವನಾದರೂ ತನ್ನ ಚಿತ್ತವನ್ನು ಮತ್ತು ಯೋಚನೆಯನ್ನು ನಿರ್ಮಲವಾಗಿಟ್ಟುಕೊಳ್ಳುವನೋ ಅವನು ಮಾತಿನಲ್ಲೂ, ಕೃತಿಯಲ್ಲೂ ಸಮರ್ಥನಾಗಲು ಪಡುವ ಪ್ರಯಾಸ ತ್ರಾಸದಾಯಕವಾಗಿರುವದಿಲ್ಲ. ಈ ಅಶುದ್ಧ ವಿಷಯಗಳು ಒಂದಲ್ಲ ಒಂದು ರೀತಿಯಲ್ಲಿ ಬರುತ್ತವೆ. ಇದು ಪ್ರಪಂಚದಿಂದಾಗಲಿ, ಶರೀರದಿಂದಾಗಲಿ ಅಥವ ಸೈತಾನನಿಂದಾಗಲಿ ಬರುವಂಥವುಗಳಾಗಿವೆ. ಪ್ರಪ್ರಥಮವಾಗಿ ನಮ್ಮ ಮನಸ್ಸಿನ ಮೇಲೆ ಆಕ್ರಮಣ ಮಾಡುವವು. ಆಗ ಅವುಗಳನ್ನು ಎದುರಿಸಿದರೆ, ನಾವು ಜಯಸಾಧಿಸಿದಂತಾಗುವುದು. ಎದುರಿಸದೇ ಹೋದರೆ, ನಮಗೇನಾಗುತ್ತದೋ ಅದು ನಮಗೆ ಗೊತ್ತಾಗುವದಿಲ್ಲ. ಅಪೋಸ್ತಲನಾದ

ಯಾಕೋಬನು ಈ ವಿಷಯವನ್ನು ಕುರಿತು ಹೀಗೆ ಹೇಳಿದ್ದಾನೆ. "ಆ ಮೇಲೆ ಆಶೆಯು (ಸ್ವಾರ್ಥತೆಯಿಂದ ಕೂಡಿರುವ ಯಾವ ಆಶೆಯೇ ಆಗಿರಬಹುದು) ಬಸುರಾಗಿ (ಮನಸ್ಸಿನಲ್ಲಿ) ಪಾಪವನ್ನು ಹೆರುತ್ತದೆ, (ಪಾಪದ ಮಾತುಗಳನ್ನು, ಪಾಪ ಕೃತ್ಯಗಳನ್ನು ವೃದ್ಧಿಮಾಡುತ್ತದೆ.) ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ" . (ಯಾಕೋಬ 1:15) Z-01, 324 (ಖ 2890).

*     *     *

ಡಿಸೆಂಬರ್ - 13

ಕರ್ತನೇ, ಈ ಪಾಪವನ್ನು ಅವರ ಮೇಲೆ ಹೊರಿಸಬೇಡವೆಂದು ಮಹಾಶಬ್ದದಿಂದ ಕೂಗಿದನು.

-ಅ.ಕೃ. 7:60

ಈ ಪಾಠವನ್ನು ಆತ್ಮೀಯ ಇಸ್ರಾಯೇಲ್ಯರು ಕಲಿಯುವದು ಉತ್ತಮ ಮತ್ತು ಶ್ರೇಷ್ಠ ಆಶೀರ್ವಾದವಾಗಿದೆ. ಯಾವುದಾದರೂ ವಿಷಯದಲ್ಲಿ ಆಗುವ ಪರಿಣಾಮವನ್ನು ಒಳ್ಳೆಯದೆಂದು ಅನುಮೋದಿಸುವದಾದರೆ, ಈ ಪರಿಣಾಮಕ್ಕೆ ನಾವು ದೈವಾನುಗ್ರಹದಿಂದ ಕೊಂಡೊಯ್ಯಲ್ಪಟ್ಟಿದ್ದೇವೆ ಎಂಬುದನ್ನು ತಿಳಿಯುವದಾಗಿದೆ. ನಾವು ಅದರ ಬಗ್ಗೆ ಯೋಚಿಸಿ, ಈ ಪರಿಣಾಮ ಸಂಭವಿಸುವದಕ್ಕೆ ದೈವಾನುಗ್ರಹದಿಂದ ಉಪಯೋಗಿಸಲ್ಪಟ್ಟವರ ವಿಷಯದಲ್ಲಿ ನಾವು ಸಹಾನುಭೂತಿಯುಳ್ಳವರಾಗಿ, ಅವರ ವಿಷಯದಲ್ಲಿ ಅನುಕಂಪ ತೋರಿಸುವವರಾಗಬೇಕು. ಒಂದು ವೇಳೆ ಅವರು ಈ ಪರಿಣಾಮದ ವಿಷಯದಲ್ಲಿ ಮನಸ್ಸಿಲ್ಲದ ಬೋಧಕರಾಗಿದ್ದಿರಬಹುದು ಅಥವಾ ಯೋಸೇಫನ ಸಹೋದರರು ವಿರುದ್ಧವಾದ ಪರಿಣಾಮವನ್ನು ನಿರೀಕ್ಷಿಸುವವರಂತೆ ಇದ್ದಿರಬಹುದು. ಅವರ ಬಗ್ಗೆ ಮೊದಲೇ ಹೇಳಿದ ಹಾಗೆ ಸಹಾನುಭೂತಿ ಮತ್ತು ಅನುಕಂಪವನ್ನು ವ್ಯಕ್ತಪಡಿಸುವದು ಆತ್ಮೀಕ ಇಸ್ರಾಯೇಲ್ಯರ ಕಾರ್ಯವಾಗಿದೆ. ಯಾರು ತಮ್ಮ ಜೀವಿತದ ಎಲ್ಲಾ ದಿನಗಳಲ್ಲಿ ಈ ಸದ್ಭಾವನೆಯನ್ನು ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸಲು ಒತ್ತಾಸೆಪಡುತ್ತಾರೋ, ಅವರು ಅಪೋಸ್ತಲನು ಹೇಳುವಂತೆ, "ಕರ್ತನಲ್ಲಿದ್ದುಕೊಂಡು ಯಾವಾಗಲು ಜಯಗಳಿಸುತ್ತಾರೆ" . ಇಂತಹ ಭಾವನೆಯುಳ್ಳವರು ಸೈತಾನನ ಬಗ್ಗೆಯಾಗಲಿ, ಅವನ ಸೇವಕರ ಬಗ್ಗೆಯಾಗಲಿ ಕಹಿಯಾದ ಮಾತುಗಳನ್ನು ಉಪಯೋಗಿಸಿ ಬೈಯುವದಿಲ್ಲ-Z '01, 331 (ಖ 2895).

*     *     *

ಡಿಸೆಂಬರ್ - 14

ಕರುಣೆಯುಳ್ಳವರು ಧನ್ಯರು; ಅವರು ಕರುಣೆ ಹೊಂದುವರು.                    ಮತ್ತಾಯ 5:7

ಎಲ್ಲರಿಗೂ ಇದು ತಿಳಿದಿಲ್ಲ. ಆದರೆ, ಅದು ವಾಸ್ತವ ಸಂಗತಿಯಾಗಿದೆ. ಅದೇನಂದರೆ, ಮನುಷ್ಯನಾದವನು ಚಲಾಯಿಸುವ ಹಾಗೂ ಅದರಿಂದ ಅವನಿಗೆ ಅಪರಿಮಿತ ಆಶೀರ್ವಾದ ದೊರಕಿಸಿಕೊಡುವ ಗುಣ ಯಾವುದೆಂದರೆ, ದೇವರಿಗಿರುವಂಥ ಕರುಣಾ ಸ್ವಭಾವ, ಅನುಕಂಪ, ಔದಾರ್ಯ. ಕರ್ತನು ಈ ಗುಣದ ಬಗ್ಗೆ ಒತ್ತಾಯ ಮಾಡುತ್ತಾನೆ. ಏಕೆಂದರೆ, ಬೇರೆ ಎಲ್ಲಾ ಜ್ಞಾನ ಅಥವಾ ಇತರೇ ಕೃಪಾ ಗುಣಗಳನ್ನು ಸಾಧನೆಯಿಂದ ಪಡಕೊಂಡಿರಬಹುದು. ಆದರೆ, ಕರುಣಾಗುಣ ಅವನಲ್ಲಿ ಇಲ್ಲದಿದ್ದರೆ, ಅಂಥಹವನನ್ನು ಕರ್ತನು ಅನುಮೋದಿಸಲಾರನು. ನಾವು ಇತರರಿಗೆ ಕರುಣೆ ತೋರಿಸದಿದ್ದರೆ, ಪರಲೋಕದ ತಂದೆಯು ನಮ್ಮನ್ನು ಕರುಣಿಸುವದಿಲ್ಲವೆಂಬುದು ನಿಮಗೆ ತಿಳಿದಿರಲಿ. ಈ ಕರುಣೆಯು ಕೇವಲ ಹೊರ ತೋರಿಕೆಗೆ ತೋರುವಂತೆ ಕ್ಷಮೆ ಮತ್ತು ಔದಾರ್ಯಕ್ಕೆ ಒಂದು ಮುಖ ಭಾವನೆ ಅಥವಾ

ಮುದ್ರೆ ಎಂದು ನಾವು ತಿಳಿಯಬಾರದೆಂದು ದೃಢಪಡಿಸುವದಕ್ಕಾಗಿ ನಮ್ಮ ಕರ್ತನು ಈ ವಿಷಯವನ್ನು ಇನ್ನೂ ಆಳವಾಗಿ ಪ್ರಸ್ತಾಪಿಸುತ್ತಾ - “ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆ ಹೋದರೆ, ಪರಲೋಕದಲ್ಲಿರುವ ನನ್ನ ತಂದೆಯು ನಿಮಗೆ ಹಾಗೆಯೇ ಮಾಡುವನು...... ಕರುಣೆ ತೋರಿಸುವವನು ಮಾತ್ರವೇ ಕರುಣೆ ಹೊಂದುವನು” , ಎಂದು ಹೇಳುತ್ತಾನೆ. ನಾವು ಕರ್ತನಿಂದ ಕ್ಷಮಾಪಣೆಯನ್ನು ಹೊಂದದೆ ಹೋದರೆ, ಎಲ್ಲವೂ ನಷ್ಟವಾಗಿ ಹೋಗುತ್ತದೆ. ಸ್ವಾಭಾವಿಕವಾಗಿ, ಇತರರು ಹೇಗೆ ನ್ಯಾಯವಾಗಿ ಬಂಧಿಸಲ್ಪಟ್ಟಿರುವರೋ, ಹಾಗೆಯೇ ನಾವು ದೇವರ ಕೋಪಕ್ಕೆ ಗುರಿಯಾಗಿದ್ದೇವೆ-Z ’01, 332-Z ’00, 70 (ಖ 2895, 2585).

*     *     *

ಡಿಸೆಂಬರ್ - 15

ಯೆಹೋವನು ನನಗೆ ಕುರುಬನು. -ಕೀರ್ತನೆಗಳು 23:1

ತನ್ನ ಜನರನ್ನು ಕರ್ತನು ಕುರಿಗಳು ಎಂಬುದಾಗಿ ಹೇಳಿರುವಾಗ ಆತನು ತನ್ನ ಮಹತ್ತರವಾದ ಗುಣದ ಸಂಕೇತವನ್ನು ಆದುಕೊಂಡಿದ್ದಾನೆ. ಅದನ್ನು ತನ್ನ ಜನರಲ್ಲಿ ಪ್ರಕಟಿಸಿದ್ದಾನೆ. ಇದರಲ್ಲಿ ಗಮನಿಸಬೇಕಾದ ಕುರಿಗಳ ಮಹತ್ತರವಾದ ಗುಣ ಯಾವದೆಂದರೆ, ದೀನತೆ, ನಮ್ರತೆ, ವಿಧೇಯತೆಯನ್ನು ತಮ್ಮನ್ನು ನಡಿಸುವ ಕುರುಬನಿಗೆ ತೋರಿಸುವದಾಗಿದೆ. ನಿಜವಾದ ಕುರಿ ತನ್ನ ಯಜಮಾನನ ಸಣ್ಣ ಧ್ವನಿಯನ್ನು ಸಹ ಕೇಳಿಸಿಕೊಳ್ಳುತ್ತದೆ. ಆ ಕುರಿಯು ತನ್ನ ಯಜಮಾನನ ಮಾತುಗಳನ್ನು ತನ್ನ ಹೃದಯದಲ್ಲಿ ಐಶ್ವರ್ಯಭರಿತವಾಗಿ ತುಂಬಿಕೊಳ್ಳುತ್ತದೆ. ಹಾಗೂ ಕರ್ತನ ನಡೆಸುವಿಕೆ, ಅನುಗ್ರಹ ಪಡೆದುಕೊಂಡು ಆತನೊಂದಿಗೆ ತನ್ನ ವೈಯಕ್ತಿಕ ಸಹವಾಸ, ಸಂಬಂಧ ಹೊಂದುವ ಅವಕಾಶವನ್ನು ಊರ್ಜಿತಗೊಳಿಸುವದು. ಯಾರು ಆತನಲ್ಲಿ ನೆಲೆಗೊಂಡಿರುತ್ತಾರೋ ಅವರು ದಾರಿ ತಪ್ಪುವದಿಲ್ಲ. ಅವರು ಎಂದೆಂದಿಗೂ ದಾರಿ ತಪ್ಪುವದಿಲ್ಲ.

*     *     *

ಡಿಸೆಂಬರ್ - 16

ನೀವು ಎಷ್ಟರವರೆಗೆ ಎರಡು ಮನಸ್ಸುಳ್ಳವರಾಗಿರುವಿರಿ? ಯೆಹೋವನು ದೇವರಾಗಿದ್ದರೆ, ಆತನನ್ನೇ ಹಿಂಬಾಲಿಸಿರಿ. ಬಾಳನು ದೇವರಾಗಿದ್ದರೆ, ಅವನನ್ನೇ ಹಿಂಬಾಲಿಸಿರಿ.

-1ಅರಸುಗಳು 18:21

ನಮಗೆ ಒಂದು ಒರೆಗಲ್ಲು ಇರಬೇಕು. ಕೆಲವು ವಿಷಯಗಳನ್ನು ನಿರ್ಣಯಿಸಲು ಹಾಗೂ ನಮ್ಮ ಮನಸ್ಸು ಶೀಘ್ರವಾಗಿ ನಿರ್ಣಯವನ್ನು ತೆಗೆದುಕೊಳ್ಳಲು ಸಾಧ್ಯವಾಗುವದಕ್ಕಾಗಿ ನಮಗೆ ಒರೆಗಲ್ಲು ಇರುವದು ಅವಶ್ಯ. ಈ ಒರೆಗಲ್ಲು ದೇವರ ಚಿತ್ತವಾಗಿರಬೇಕು. ನಾವು ಯಾವದಾದರೂ ಸಮಸ್ಯೆಯಲ್ಲಿ ಸಿಕ್ಕಿಕೊಂಡಿರುವಾಗ ದೇವರ ಚಿತ್ತವನ್ನು ಗ್ರಹಿಸಿ, ಆ ಸಮಸ್ಯೆಗೆ ಉತ್ತರವನ್ನು ಕಂಡುಕೊಂಡು ಅದನ್ನು ನಿವಾರಿಸಿಕೊಳ್ಳಬಹುದು. ಶೀಘ್ರವಾಗಿ ನಿರ್ಣಯಿಸಲು ಹಾಗೂ ಸರಿಯಾದ ಮಾರ್ಗದಲ್ಲಿ ನಡೆಯಲು ಸಾಮರ್ಥ್ಯಬೇಕು. ಅದಕ್ಕೆ ಕರ್ತನೊಂದಿಗೆ ಅನುಭವ ಹಾಗೂ ಶಿಕ್ಷಣ ಬೇಕಾಗಿರುವದು. ಕರ್ತನು ಅದನ್ನು

ಕೊಡುವನು.  ಎಷ್ಟು ಬೇಗ ಈ ಸಾಮರ್ಥ್ಯವನ್ನು ಹೊಂದುವೆವೋ, ಅಷ್ಟು ಬೇಗ ನಾವು ಇದರಲ್ಲಿ ಪ್ರವೀಣರಾಗುವೆವು.  ನಾವು ಹೆಚ್ಚು ಹೆಚ್ಚಾಗಿ ಬಲವುಳ್ಳವರಾಗಿ ಕರ್ತನ ಚಿತ್ತವನ್ನು ಗ್ರಹಿಸಿ, ಆ ಚಿತ್ತವನ್ನು ನೆರವೇರಿಸುತ್ತೇವೆ; ಹಾಗೂ ನಾವು ಕರ್ತನಿಗೆ ಪ್ರಾಮಾಣಿಕರಾಗಿ ಆತನ ಚಿತ್ತವನ್ನು ನೆರವೇರಿಸಲು ಸಂತೋಷಿಸುತ್ತೇವೆ ಎಂಬದಾಗಿ ವ್ಯಕ್ತಪಡಿಸುವದರಿಂದ ನಾವು ಆದಷ್ಟು ಬೇಗನೆ ನಮ್ಮ ಗುಣವನ್ನು ಸರಿಯಾದ ರೀತಿಯಲ್ಲಿ ಸ್ಥಿರಪಡಿಸಲು ಸಾಧ್ಯವಾಗುತ್ತದೆ-Z ’02, 42 (ಖ 2950).

*     *     *

ಡಿಸೆಂಬರ್ - 17

ಹೀಗಿರುವಲ್ಲಿ ಪ್ರಿಯರೇ.......... ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ.  ಯಾಕಂದರೆ, ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ, ಪ್ರಯತ್ನವನ್ನೂ ಉಂಟುಮಾಡುವವನಾಗಿದ್ದಾನೆ.          -ಫಿಲಿಪ್ಪಿ 2:12,13

ದೇವರೇ, ಕ್ರಿಸ್ತ ಯೇಸುವಿನಲ್ಲಿ ನಮಗೆ ವಿಮೋಚನೆಯನ್ನು ಒದಗಿಸಿದ್ದಾನೆ.  ದೇವರೇ, ನಮ್ಮನ್ನು ತನ್ನ ಬಳಿಗೆ ಸೆಳೆದುಕೊಂಡಿದ್ದಾನಲ್ಲದೆ ಮತ್ತು ಎಲ್ಲಾ ರೀತಿಯ ಕೃಪೆಯನ್ನೂ, ಸಹಾಯವನ್ನೂ ನಮಗೆ ಅನುಗ್ರಹಿಸಿದ್ದಾನೆ.  ನೀತಿಯ ಮಾರ್ಗದಲ್ಲಿ ನಡೆಯುವಂತೆ ಮಾಡಿದ್ದಾನೆ.  ಅದೂ ಅಲ್ಲದೆ, ನಾವು ಕ್ರಿಸ್ತನ ಹೆಜ್ಜೆಯ ಜಾಡಿನಲ್ಲಿ ನಡೆದು ನಮ್ಮನ್ನು ನಾವು ದೇವರಿಗೆ ಯಜ್ಞಾರ್ಪಿತರಾಗುವಂತೆಯೂ ಮಾಡಿದ್ದಾನೆ. ಹೀಗಿರುವಲ್ಲಿ ನಾವು ಮನೋಭೀತಿಯಿಂದ ನಡುಗವವರಾಗಿ ಬಹಳ ಎಚ್ಚರಿಕೆಯಿಂದಿದ್ದು, ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳೋಣ.  ನಮ್ಮ ಕೊರತೆಯನ್ನು ದೇವರು ಎಲ್ಲಾ ಸಂದರ್ಭಗಳಲ್ಲೂ ಕೃಪಾಪೂರ್ಣನಾಗಿ ನೀಗಿಸುವನು ಎಂಬ ವಾಗ್ದಾನವನ್ನು ನಾವು ಗಣನೆಗೆ ತೆಗೆದುಕೊಂಡು ದೃಢಚಿತ್ತವುಳ್ಳವರಾಗಿ ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನಾವು ನೀತಿಯನ್ನು ಅನುಸರಿಸಲು ಪ್ರಯತ್ನಿಸುವವರಾಗಿರೋಣ.  ಇದನ್ನು ನಾವು ಕ್ರಿಸ್ತನು ಸಮರ್ಪಿಸಿದ ಯಜ್ಞದಿಂದ ನಮಗೆ ಒದಗಿರುವ ನೀತಿಯನ್ನು ಆಶ್ರಯಿಸಿ ಶ್ರಮಿಸುವದನ್ನು ದೇವರು ಮೆಚ್ಚುತ್ತಾನೆ-Z ’97, 147 (ಖ 2154).

*     *     *

ಡಿಸೆಂಬರ್ - 18

ಕರ್ತನು ನನ್ನ ಸಹಾಯಕನು; ಭಯಪಡೆನು.  ಮನುಷ್ಯನು ನನಗೆ ಏನು ಮಾಡಾನು?

-ಇಬ್ರಿಯ 13:6

ನಾವು ನಮ್ಮ ಜೀವಿತದಲ್ಲಿ ಸರಿಯಾಗಿರಬೇಕಾದರೆ, ಜೀವಿತದಲ್ಲಿ ನಮಗೆ ಒದಗಿ ಬರುವ ಪರೀಕ್ಷೆಗಳು ಸಂಕಷ್ಟಗಳನ್ನು ಸ್ಪಂದಿಸಬೇಕಾದರೆ, ಅವುಗಳನ್ನು ನಮ್ಮ ಕರ್ತನು ತನ್ನ ಆತ್ಮನ ಮೂಲಕ ನಿರ್ದೇಶಿಸುವದನ್ನು ನಾವು ಅರಿತು ಅವುಗಳನ್ನು ಸ್ಪಂದಿಸಬೇಕಾದರೆ ಮತ್ತು ಈ ಸ್ಥಿತಿಗಳಲ್ಲಿ, ಸಂಕಟಗಳಲ್ಲಿ ಸಂತೋಷಿಸುವವರಾಗಿರಬೇಕಾದರೆ, ಅವುಗಳನ್ನು ಸಂತೋಷಿಸುವ ಅನುಭವಗಳು ಎಂಬದಾಗಿ ಪರಿಗಣಿಸಬೇಕಾದರೆ, ನಾವು ಮನುಷ್ಯರಿಂದ ಒದಗಬಹುದಾದ ಭಯವನ್ನು ಮತ್ತು ಅದರಿಂದಾಗುವ

ಉರುಳನ್ನು ಕಿತ್ತುಹಾಕಬೇಕು. ಕರ್ತನ ನಿರ್ದೇಶನವೇನಂದರೆ, ನಾವು ಯೆಹೋವನಿಗೆ ಭಯಪಡುವವರಾಗಿರಬೇಕೇ ಹೊರತು, ನರ ಮನುಷ್ಯರಿಗಲ್ಲ. ನೀತಿವಂತರು ಸಿಂಹದಂತೆ ಧೈರ್ಯಶಾಲಿಗಳು ಹಾಗೆಯೇ ಪಾರಿವಾಳದಂತೆ ನಿಷ್ಕಪಟಿಗಳು ಮತ್ತು ಕುರಿಮರಿಯಂತೆ ದೀನರೂ ಆಗಿದ್ದಾರೆ. ಇಂತಹ ವಿಶೇಷಕರವಾದ ಮಿಶ್ರಣಗಳು ಪ್ರತಿಯೊಬ್ಬ ನಿಜ ಕ್ರೈಸ್ತರಲ್ಲಿ ಇರಬೇಕು. ಅಲ್ಲದೆ, ಬೇರೆ ಕಡೆ ಇರುತ್ತದೆ ಎಂಬುದನ್ನು ನಾವು ನಂಬುವದಿಲ್ಲ-Z ’02, 45 (ಖ 2951).

* * *

ಡಿಸೆಂಬರ್ - 19

ಯುದ್ಧಕ್ಕಾಗಿ ನಡುಕಟ್ಟನ್ನು ಬಿಗಿದುಕೊಳ್ಳುವವನು, ಅದನ್ನು ಬಿಚ್ಚಿಡುವ ಜಯಶಾಲಿಯಂತೆ ಹೆಚ್ಚಳಪಡಬಾರದು ಎಂದು ಅವನಿಗೆ ಹೇಳಿರಿ ಅಂದನು. -1ಅರಸು 20:11

ದೇವರು ಆದುಕೊಂಡ ಸಭೆಗೆ ಸಹನಾಶಕ್ತಿಯ ಪರೀಕ್ಷೆಯು ನಂಬಿಕೆಯ ಬಹು ಕಠೋರವಾದ ಪರೀಕ್ಷೆಗಳಲ್ಲಿ ಒಂದಾಗಿದೆ. ಈ ಪರೀಕ್ಷೆಗೆ ದೇವರು ಸಭೆಯನ್ನು ಒಳಪಡಿಸುವನು. ಈ ಪರೀಕ್ಷೆಯು ಬೇರೆ ಎಲ್ಲಾ ಗುಣಗಳು ಬಲಯುತವಾಗಿರುವುದನ್ನು ಅಳತೆ ಮಾಡುತ್ತದೆ. ಈ ಸಹಿಸಿಕೊಳ್ಳುವ ಗುಣವುಳ್ಳ ಕ್ರಿಸ್ತನ ಶಿಲುಬೆಯ ಸೈನಿಕನು ಬಹುಮಾನವನ್ನು ಪಡೆಯುವನು. ಈ ಪರೀಕ್ಷೆಯಲ್ಲಿ ಅವನು ಉತ್ತೀರ್ಣನಾಗಬೇಕು. ಈಗ ನಡೆಯುತ್ತಿರುವ ಹೋರಾಟದಲ್ಲಿ ಬೇರೆ ಎಲ್ಲಾ ಹೋರಾಟದಂತೆ ವೈರಿಯು ಗೊತ್ತಿಲ್ಲದ ರೀತಿಯಲ್ಲಿ ದೇವಜನರ ಮೇಲೆ ಆಕ್ರಮಣ ಮಾಡುವನು ಅವನನ್ನು ಆವರಿಸಿಕೊಳ್ಳುವನು. ಇಂಥಹ ಸಂದರ್ಭದಲ್ಲಿ ಕರ್ತನ ಜನರು ಈ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಲು ಎಚ್ಚರಿಕಯಿಂದಿದ್ದು, ಪ್ರಾರ್ಥನೆ ಮಾಡುವದೂ ಹಾಗೂ ದೇವರು ಒದಗಿಸಿರುವ ಎಲ್ಲಾ ಆಯುಧಗಳನ್ನು ಅಂದರೆ, ಸತ್ಯ ಮತ್ತು ಸತ್ಯದ ಆತ್ಮವನ್ನು ಧರಿಸಿಕೊಂಡು ಹೋರಾಡಿ ಜಯಿಸಬೇಕು-Z ’94, 155 (ಖ 1656).

* * *

ಡಿಸೆಂಬರ್ - 20

ನೀನು ದೇವರ ದೃಷ್ಟಿಗೆ ಯೋಗ್ಯವಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನು ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು.

-2ತಿಮೋಥಿ 2:15

ಅಧ್ಯಯನ ಎನ್ನುವ ಪದದಲ್ಲಿ ಹೆಚ್ಚಿನ ವಿಶೇಷತ್ವ ಇದೆ. ಸತ್ಯವಾಕ್ಯವನ್ನು ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡಿ ಉಪದೇಶಿಸುವವನು, ಇಕ್ಕಟ್ಟಾದ ಮಾರ್ಗವನ್ನು ಕಂಡುಕೊಳ್ಳುವನು ಹಾಗೂ ದೇವರ ಅನುಮೋದನೆ ಮತ್ತು ಕೃಪೆಗೆ ಪಾತ್ರನಾಗುವನು. ದೇವರಿಗೆ ಮೆಚ್ಚಿಗೆಯಾಗುವ ರೀತಿಯಲ್ಲಿ ಅಧ್ಯಯನ ಮಾಡು, ಬೋಧನೆಗಳನ್ನು ಅಧ್ಯಯನ ಮಾಡು. ನೀನು ನಡೆಯಬೇಕಾದ ರೀತಿಯನ್ನು ಹಾಗೂ ಬೋಧನೆಗಳಿಗನುಸಾರವಾಗಿ ನಿನ್ನ ನಡತೆಯನ್ನು ಸರಿಪಡಿಸಿಕೊಂಡು ನಡೆ. ಶಾಂತಿ ಸಮಾಧಾನವನ್ನು ಹಾಗೂ ಚಿಯೋನನ್ನು ಅಭಿವೃದ್ಧಿಪಡಿಸುವ ಅಧ್ಯಯನ ಮಾಡುವದಲ್ಲದೆ, ಹಾಗೂ ತಪ್ಪಾದ ಬೋಧನೆಗಳಿಂದಲೂ, ಸುಳ್ಳು ಸಿದ್ಧಾಂತಗಳಿಂದಲೂ ನಿನ್ನನ್ನೂ ಮತ್ತು ನಿನ್ನ ಬೋಧನೆಗೆ ಕಿವಿಗೊಡುವವರನ್ನು ಇವುಗಳಿಂದ ದೂರವಾಗಿಡಲು ಪ್ರಯತ್ನಿಸು. ಅವುಗಳು ಕೆಟ್ಟತನದಿಂದಲೂ, ಲೌಕಿಕ ದುರಾಶೆಗಳಿಂದ ತುಂಬಿದೆ. ನೀನು ಒಬ್ಬ ನಂಬಿಗಸ್ತ ಶಿಲುಬೆಯ ಸೈನಿಕನಾಗಿ ನಿನ್ನ ಕರ್ತವ್ಯವನ್ನು

ನಿರ್ವಹಿಸಲಿಕ್ಕೆ ಅಧ್ಯಯನ ಮಾಡು.  ಲೋಕದ ದೃಷ್ಟಿಯಲ್ಲಿ ಇದು ಕಾಣುವಂತದಲ್ಲದಿದ್ದರೂ, ಇದು ಗಂಭೀರವಾದ ಹಾಗೂ ಗೌರವಾನ್ವಿತ ಕ್ರಿಯೆಯಾಗಿದೆ-Z ’02, 318 (ಖ 3096).

*     *     *

ಡಿಸೆಂಬರ್ - 21

ಯಾವನು ಯೋಗ್ಯನು?                                                  -ಪ್ರಕಟಣೆ 5:2

ಪ್ರಿಯ ಸಹೋದರರೇ ದೇವರು ನಮ್ಮನ್ನು ಆತನ ಸುರಳಿಯಲ್ಲಿ ಅಡಕವಾಗಿರುವ ದೈವ ಯೋಜನೆಯನ್ನು ತಿಳಿಯಲಿಕ್ಕೆ ಯೋಗ್ಯರೆಂದು ಪರಿಗಣಿಸಿರುವದಕ್ಕಾಗಿ ಸಂತೋಷಪಡೋಣ.  ಈ ಸುರುಳಿಗೆ ಹಾಕಿದ್ದ ಮುದ್ರೆಯನ್ನು ಯೂದ ಕುಲದ ಸಿಂಹವಾಗಿರುವ ನಮ್ಮ ಪ್ರಿಯ ಯೇಸು ಕರ್ತನು ಒಡೆದು ಹಾಕಿರುವದರಿಂದ, ಅದರಲ್ಲಿ ಅಡಕವಾಗಿರುವ ದೈವ ಯೋಜನೆಯನ್ನು ನಾವು ನೋಡುತ್ತಾ ಹಾಗೂ ಆತನ ಧರ್ಮಶಾಸ್ತ್ರವನ್ನು ತಿಳಿದುಕೊಳ್ಳಲು ನಾವು ಯೋಗ್ಯರೆಂದು ಪರಿಗಣಿಸಿರುವದಕ್ಕಾಗಿ ದೇವರಿಗೆ ಕೃತಜ್ಞತೆಯನ್ನು ಅರ್ಪಿಸೋಣ ಮತ್ತು ಅದರಲ್ಲಿ ಅಡಕವಾಗಿರುವ ಎಲ್ಲದಕ್ಕೂ ನಾವು ವಿಧೇಯರಾಗಿಯೂ ಮತ್ತು ಪ್ರಾಮಾಣಿಕರಾಗಿಯೂ ನಡೆಯೋಣ.  ದೈವ ಸತ್ಯವೆಂಬ ಬೆಳಕಿನಲ್ಲಿ ನಾವು ಸ್ವಲ್ಪ ಭಾಗವನ್ನಾದರೂ ಪ್ರಕಾಶಿಸುವಂತೆ ಮಾಡಲು ಕೊಟ್ಟಿರುವ ಅವಕಾಶವನ್ನು ಕಡೆಗಣಿಸದೆ, ನಾವು ಅಪರೂಪದ ಒಡವೆಗಳಂತೆಯೂ, ವಜ್ರದಂತೆಯೂ ದೇವರಿಗೆ ರುಜುಪಡಿಸುವವರಾಗಿ ಈ ಸಂಗತಿಗಳನ್ನು ಹೃದಯಪೂರ್ವಕವಾಗಿ ಅಂಗೀಕರಿಸಿ ಈ ಬೆಳಕನ್ನು ನಾವು ಇತರರಿಗೆ ಪ್ರಕಾಶಿಸುವಂತೆ ಮಾಡೋಣ, ಆ ಸ್ಥಿತಿಯಲ್ಲಿ ನಮಗೆ ಒದಗಿಬರುವ ಕಠಿಣಕರವಾದ ಕಷ್ಟಗಳನ್ನು ನಂಬಿಗಸ್ತರಾಗಿ ಸಹಿಸಿಕೊಂಡು ಮುಂದುವರಿಯೋಣ.  ಸಂಭವಿಸುವ ಈ ಅಲ್ಪ ಕಷ್ಟಗಳನ್ನು ನಾವು ನಂಬಿಕೆಯಿಂದ ಸಹಿಸಿಕೊಳ್ಳುವವರಾದರೆ, ನಮ್ಮನ್ನು ದೇವರು ಕ್ರಿಸ್ತನ ರಾಜ್ಯದಲ್ಲಿ, ಕ್ರಿಸ್ತನೊಂದಿಗೆ ಮಹಿಮೆಯಲ್ಲಿ ಆಳ್ವಿಕೆ ಮಾಡಲು ಯೋಗ್ಯರಾಗಿದ್ದೇವೆ ಎಂದು ಪರಿಗಣಿಸುವನು-Z ’02, 333 (ಖ 3103).

*     *     *

ಡಿಸೆಂಬರ್ - 22

ಹೀಗಿರಲಾಗಿ ಒಬ್ಬನು ಹೀನ ನಡತೆಯುಳ್ಳವರ ಸಹವಾಸವನ್ನು ಬಿಟ್ಟು ತನ್ನನ್ನು ಶುದ್ಧ ಮಾಡಿಕೊಂಡರೆ ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು; ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ, ಯಜಮಾನನಿಗೆ ಉಪಯುಕ್ತನಾಗಿಯೂ, ಸಕಲ ಸತ್ಕ್ರಿಯೆಗಳನ್ನು ಮಾಡುವದಕ್ಕೆ ಸಿದ್ಧನಾಗಿಯೂ ಇರುವನು.                                                  -2 ತಿಮೋಥಿ 2:21

ಯಾವನಾದರೂ ದೇವರಿಂದ ಮಾನ ಹೊಂದಬೇಕಾದರೆ, ಅದಕ್ಕೆ ದೇವರು ನೇಮಕ ಮಾಡಿರುವ ರೀತಿಯಿಂದಲೇ ಪಡೆಯಬೇಕು.  ಅಂದರೆ, ಅವನು ದೀನ ಮನಸ್ಸುಳ್ಳವನಾಗಿ ನಡೆಯಬೇಕು.  ಯಾಕಂದರೆ, ಕರ್ತನು ದೀನ ಮನಸ್ಸುಳ್ಳವರನ್ನು ಕಟಾಕ್ಷಿಸುತ್ತಾನೆ.  ಹೀಗಿರುವಲ್ಲಿ ನೀನು ದೇವರ ಸೇವೆಗೆ ಮಾನವುಳ್ಳ ಮತ್ತು ಉಪಯುಕ್ತಕರವಾದ ಪಾತ್ರೆಯಾಗಬೇಕಾದರೆ, “ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ.  ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು.  ಈ ವಿಷಯದಲ್ಲಿ ನೀನು ಆತುರಪಡಬೇಡ.  ಆದರೆ, “ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣ ಶಕ್ತಿಯಿಂದ ಮಾಡು” .

ಅದನ್ನು ಪ್ರಾರಂಭಿಸಿ ಮುಂದುವರಿಸುತ್ತಾ ನಿನ್ನನ್ನು ನೀನು ಶುದ್ಧಿಪಡಿಸಿಕೊಂಡರೆ, ದೇವರ ಸೇವೆ ಮಾಡಲು ಯೋಗ್ಯನಾಗುವಿ-Z '02, 319 (ಖ 3096).

* * *

ಡಿಸೆಂಬರ್ - 23

ತಕ್ಕ ಉತ್ತರ ಕೊಡುವವನಿಗೆ ಎಷ್ಟೋ ಉಲ್ಲಾಸ, ಸಮಯೋಚಿತವಾದ ವಚನದಲ್ಲಿ ಎಷ್ಟೋ ಸ್ವಾರಸ್ಯ. -ಜ್ಞಾನೋಕ್ತಿಗಳು 15:23

ಬೆಳ್ಳಿಯ ನಕಾಸಿಯಲ್ಲಿ ಖಚಿತವಾದ ಬಂಗಾರದ ಹಣ್ಣುಗಳಿಗೆ ಸಮಾನ.

-ಜ್ಞಾನೋಕ್ತಿಗಳು 25:11

ಕೇಳುವ ಕಿವಿಯುಳ್ಳವರೊಂದಿಗೆ ನಾವು ಮಾತಾಡುತ್ತಿರುವಾಗ ಹಾಗೂ ಕರ್ತನ ದಾರಿಯ ವಿಷಯವಾಗಿ ತಿಳಿಯಲು ನಮ್ಮನ್ನು ವಿಚಾರಿಸುತ್ತಿರುವಾಗ, ಅವರ ಜೀವನದಲ್ಲಿ ಸಂಕಷ್ಟಗಳು ಅಥವ ಬಿಕ್ಕಟ್ಟುಗಳು ಉಂಟಾಗಿರಬಹುದು. ಅಂತಹ ಸಂದರ್ಭದಲ್ಲಿ ಕಾಲೋಚಿತವಾದ ಒಂದು ಮಾತು ಸಾಕು. ಬೇರೆ ಸಮಯಗಳಲ್ಲಿ ನೂರು ಅಥವ ಸಾವಿರ ಮಾತುಗಳನ್ನಾಡುವದಕ್ಕಿಂತ ಈ ಒಂದು ಮಾತು ಅವರನ್ನು ಸಮಾಧಾನಪಡಿಸಿ ಅವರ ಜೀವನದ ಪಥವೇ ದೇವರ ಪಥದಲ್ಲಿ ಸೇರಬಹುದು. ಹೀಗಿರುವಲ್ಲಿ ನಾವು ದೇವರ ಸೇವೆ ಮಾಡುವಾಗ ಆ ಸಮಯ ನಮಗೆ ಅನುಕೂಲವಾಗಿದ್ದರೂ, ಅನಾನುಕೂಲವಾಗಿದ್ದರೂ ನಾವು ಸಂತೋಷವಾಗಿ ನಮ್ಮ ಕಾಲವನ್ನು ಸಹೋದರರಿಗೋಸ್ಕರ ಮೀಸಲಾಗಿಡಬೇಕು. ನಾವು ಇತರರಿಗೆ ಅದು ಸಕಾಲವಾಗಿದೆಯೋ ಅಥವಾ ನಮಗೆ ಸಕಾಲವಾಗಿರುವದಿಲ್ಲವೋ ಎಂಬದನ್ನು ಪರಿಗಣಿಸಬೇಕು; ಮತ್ತು ಆ ಕಾಲವು ನಮಗೆ ಸಕಾಲವಾಗಿರದಿದ್ದರೂ ನಾವು ಸಂತೋಷವಾಗಿ, ಅದು ಅವರಿಗೆ ಸಕಾಲವಾಗಿದ್ದರೆ, ಆ ಅವಕಾಶವನ್ನು ನಾವು ಉಪಯೋಗಿಸಿ ಸೇವೆ ಸಲ್ಲಿಸಬೇಕು. ಆ ಕಾಲ ನಮಗೆ ಅನುಕೂಲವಾಗಿದ್ದರೂ, ಇತರರಿಗೆ ಅದು ಸಕಾಲವಾಗದೆ ಇರುವಾಗ ಸುವಾರ್ತೆಯನ್ನು ಸಾರಬಾರದು-Z '02, 381, 382 (ಖ 3122).

* * *

ಡಿಸೆಂಬರ್ - 24

ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕಂದರೆ, ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು ಎಂದನು. -ಮತ್ತಾಯ 1:21

ದೈವಾನುಗ್ರಹದ ಮೇರೆಗೆ ನಡೆಯುವ ಸಣ್ಣ ಸಣ್ಣ ಘಟನೆಗಳನ್ನು ನಾವು ಗಮನಿಸಬೇಕು. ದೇವರು ರಕ್ಷಕನ ಜನನವನ್ನು ಹಾಗೂ ಆತನ ಮೂಲಕ ಸುವಾರ್ತೆಯ ಸಂದೇಶವನ್ನು, ದೇವ ಜನರನ್ನು ಬಲಪಡಿಸಲಿಕ್ಕಾಗಿ ಕಳುಹಿಸಿಕೊಟ್ಟದ್ದನ್ನು ನಾವು ಗ್ರಹಿಸಬೇಕಾಗಿದೆ. ಹಿಂದೆ ದೇವರು ಚಿಕ್ಕ ಚಿಕ್ಕ ಸಂಗತಿಗಳ ವಿಷಯವಾಗಿ ಎಚ್ಚರಿಕೆ ವಹಿಸಿದ್ದನ್ನು ನಾವು ಗ್ರಹಿಸುವದಾದರೆ, ತಿಳುಕೊಳ್ಳುವದಾದರೆ, ಅವುಗಳು ನಮ್ಮ ವಿಶ್ವಾಸಕ್ಕೆ ಬುನಾದಿಯಾಗಿ ದೇವರು ತನ್ನ ಯೋಜನೆಯಂತೆ ಭವಿಷ್ಯದಲ್ಲಿ ನಿರ್ವಹಿಸುವ ಕಾರ್ಯಗಳ ಬಗ್ಗೆ

ನಂಬಿಕೆ ಹೆಚ್ಚಾಗುವದು. ಅದರಲ್ಲೂ ದೇವರು ಮಾಡಿರುವ ಅಪರಿಮಿತ ವಾಗ್ದಾನಗಳು ಬೆತ್ಲೆಹೇಮಿನಲ್ಲಿ ಜನಿಸಿದ ನಮ್ಮ ಕರ್ತನಲ್ಲಿ ಕ್ರೋಢೀಕೃತವಾಗಿದೆ ಎಂಬುದು ನಮ್ಮ ವಿಶ್ವಾಸವನ್ನು ಇನ್ನೂ ಹೆಚ್ಚಿಸುವದು. ಹಾಗೆಯೇ ದೈವ ಯೋಜನೆಯ ಅತಿ ಹೆಚ್ಚಿನ ಸಂಗತಿಗಳು ನೆರವೇರುತ್ತಿರುವದನ್ನು ಹಾಗೂ ಮುಂದೆ ನೆರವೇರುವದನ್ನು ನಾವು ತಿಳಿಯುವದಾದರೆ ನಮ್ಮ ಕರ್ತನಲ್ಲಿ ನಮ್ಮ ನಂಬಿಕೆಯು ವ್ಯಕ್ತಿಗತವಾಗಿಯೂ, ಖಾಸಗಿಯಾಗಿಯೂ ದೃಢೀಕರಿಸಲ್ಪಟ್ಟು ಆತನ ಅನುಗ್ರಹ ಮತ್ತು ಕೃಪೆ ತುಂಬಿ ತುಳುಕಾಡುವದು-Z ’00, 8 (ಖ 2555).

*     *     *

ಡಿಸೆಂಬರ್ - 25

ಹೆದರಬೇಡಿರಿ, ಕೇಳಿರಿ; ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭ ಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನಂದರೆ, ಈ ಹೊತ್ತು ನಿಮಗೋಸ್ಕರ ದಾವಿದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ. - ಲೂಕ 2:10,11

ಕ್ರಿಸ್ತನು ಅಂದರೆ ನಮ್ಮ ವಿಮೋಚಕನು ಈ ದಿನದಲ್ಲಿ ಹುಟ್ಟಿದ ಎಂಬುದನ್ನು ನಾವು ಒಪ್ಪುವದಿಲ್ಲ. ಆತನು ಜನಿಸಿದ್ದು ಅಕ್ಟೋಬರ್ 1ನೇ ದಿನಾಂಕದಂದು ಎಂದು ಒತ್ತಿ ಹೇಳುತ್ತೇವೆ. (ದೈವೋಕ್ತಿಗಳ ಅಧ್ಯಯನ ಗ್ರಂಥ, 2ನೇ ಪರಿಚ್ಛೇದ ಪುಟ 54) ಆದರೂ ಕರ್ತನು ತನ್ನ ಜನನ ದಿನವನ್ನು ಆಚರಿಸಬೇಕು ಎಂಬುದಾಗಿ ಎಲ್ಲೂ ಹೇಳದೇ ಇರುವದರಿಂದ, ಆತನು ಹುಟ್ಟಿದ ದಿನ ಯಾವದೇ ಆಗಿದ್ದರೂ, ಆ ಒಂದು ಘಟನೆ ಎಲ್ಲರಿಗೂ ಬಹಳ ಪ್ರಾಮುಖ್ಯವಾದುದಾಗಿದೆ. ಈ ದಿವಸದಲ್ಲಿ ಸಾಮಾನ್ಯವಾಗಿ ಆತನ ಜನನವನ್ನು ಆಚರಿಸುತ್ತಿರುವಾಗ, ನಾವು ಹೃದಯಪೂರ್ವಕವಾಗಿ ಈ ವಿಷಯದಲ್ಲಿ ಆಸಕ್ತಿ ಹೊಂದಿರುವವರೊಂದಿಗೆ ಹಾಗೂ ದೇವರಲ್ಲಿ ಮತ್ತು ನಮ್ಮ ರಕ್ಷಕನನ್ನು ಪ್ರೀತಿಸಿ ಮೆಚ್ಚುವವರ ಜೊತೆಯಲ್ಲಿ ನಾವು ಸೇರಿಕೊಂಡು ಸಂತೋಷಪಡೋಣ. ವರ್ಷಾಂತ್ಯದ ಈ ದಿನದಲ್ಲಿ ನಾವು ಒಬ್ಬರನ್ನೊಬ್ಬರು ಜ್ಞಾಪಕಪಡಿಸುವದು ಹೆಚ್ಚು ಯುಕ್ತವಾಗಿ ಕಂಡುಬರುವದು. ದೇವರು ಒಳ್ಳೆಯ ಮತ್ತು ಪರಿಪೂರ್ಣ ಅತಿ ಶ್ರೇಷ್ಠವಾದ ವರಗಳನ್ನು ಕೊಡುವವನಾಗಿದ್ದಾನೆ. ಆತನು ಇವುಗಳನ್ನು ಸದಾ ಕೊಡುವವನಾಗಿದ್ದಾನೆ ಮತ್ತು ನಾವು ಅವುಗಳನ್ನು ಸದಾ ಸ್ವೀಕರಿಸುತ್ತಿದ್ದೇವೆ. ಆದರೆ, ಈ ಎಲ್ಲಾ ವರಗಳಲ್ಲಿ ತನ್ನ ಮಗನನ್ನು ವಿಮೋಚಕನನ್ನಾಗಿ ನಮಗೆ ದಯಪಾಲಿಸಿರುವನು. ಈ ಬಳುವಳಿಯು ನಮ್ಮೆಲ್ಲರಿಗೂ ಅತಿ ಶ್ರೇಷ್ಠವಾದ ಬಹುಮಾನವಾಗಿದೆ-Z ’03, 457 (ಖ 3289).

*     *     *

ಡಿಸೆಂಬರ್ - 26

ಸ್ಥಿರಚಿತ್ತನಾಗಿರು; ಪೂರ್ಣ ದೈರ್ಯದಿಂದಿರು. -ಯೆಹೋಶುವ 1:7

“ಸ್ಥಿರಚಿತ್ತನಾಗಿರು; ಪೂರ್ಣ ಧೈರ್ಯದಿಂದಿರು.” ಇದರಲ್ಲಿ ವಿವಿಧ ರೀತಿಯ ಧೈರ್ಯಗಳಿವೆ. ಅದರಲ್ಲಿ ಒಂದು ಸ್ವಾರ್ಥ ಭಾವನೆ ಅಥವ ದುರಭಿಮಾನದಿಂದ ಉದ್ಭವವಾಗುವಂಥ ಧೈರ್ಯ, ಮತ್ತೊಂದು ನಿರ್ಲಕ್ಷ್ಯದಿಂದ ಉಂಟಾಗಿರುವ ಪರಿಸ್ಥಿತಿಯಲ್ಲಿ ಒದಗಿಬರುವ ಕಷ್ಟಗಳನ್ನು ಎದುರಿಸುವಲ್ಲಿ ವಿಫಲರಾಗುವದು. ಆದರೆ, ಕರ್ತನು ನಮಗೆ ಪದೇ ಪದೇ ಕೊಡುವ ಧೈರ್ಯ, ಅದನ್ನು ಪ್ರತಿಯೊಬ್ಬ ಆತ್ಮೀಕ ಇಸ್ರಾಯೇಲ್ಯನು ಹೊಂದುವಂಥದ್ದು ಏನಂದರೆ, ಅವನು ತನಗೆ ಬರಬಹುದಾದ ಪರೀಕ್ಷೆಗಳು ಮತ್ತು ಒದಗಬಹುದಾದ ಸಂಕಷ್ಟಗಳನ್ನು ತಾಳ್ಮೆಯಿಂದಲೂ, ಸಮಾಧಾನದಿಂದಲೂ ಅಂಗೀಕರಿಸಿ ಅವುಗಳನ್ನು ಸಹಿಸಲು ತನ್ನಲ್ಲಿ ಕೊರತೆ ಇರುವದನ್ನು ಮನಗಂಡು ಕರ್ತನಲ್ಲಿ ನಂಬಿಕೆಯಿಟ್ಟು ಹಾಗೂ ದೈವೀಕ ವಾಗ್ದಾನಗಳಲ್ಲಿ ಭರವಸೆ ಇಡುವದರಿಂದ ಕರ್ತನಲ್ಲಿ ಬಲಶಾಲಿಯಾಗಿ ಆತನ ಶಕ್ತಿಯಿಂದ ಅವುಗಳನ್ನು ಧೈರ್ಯದಿಂದ ನಿಭಾಯಿಸಲು ಸಾಧ್ಯವಾಗುವದು-Z ’02, 285 (ಖ 3079).

*    *    *

ಡಿಸೆಂಬರ್ - 27

ಪ್ರಿಯರಾದ ಮಕ್ಕಳೇ, ವಿಗ್ರಹಗಳಿಂದ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ.

-1ಯೋಹಾನ 5:21

ನಾವು ನಮ್ಮ ವಿಶ್ವಾಸವನ್ನು ನಮ್ಮ ನಾಯಕರಲ್ಲಿಡದೆ ಕರ್ತನಲ್ಲಿ ಇಡಬೇಕು. ಆದರೆ, ಇದು ನಮ್ಮ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಾರದು ಅಥವಾ ಅವರನ್ನು ಪರಿಗಣಿಸಬಾರದೆಂದು ನಮ್ಮ ಅರ್ಥವಲ್ಲ. ನಾವು ಚರಿತ್ರೆಯಲ್ಲಿ ಹಾಗೂ ಕರ್ತನು ತನ್ನ ಜನರಲ್ಲಿ ವ್ಯವಹಾರ ಮಾಡುವಾಗ (ಅಂದರೆ, ಶಾರೀರಿಕ ಇಸ್ರಾಯೇಲ್ಯರಾಗಲಿ, ಅತ್ಮೀಕ ಇಸ್ರಾಯೇಲ್ಯರಾಗಲಿ) ನಾವು ಗಮನಿಸುವದೇನಂದರೆ, ತನ್ನನ್ನು ಪ್ರತಿನಿಧಿಸುವ ಮಾನವರನ್ನು ಬೋಧನೆ ಮಾಡಲಿಕ್ಕೂ ಹಾಗೂ ಅವರನ್ನು ಕೃಪೆಯಿಂದ ಕೃಪೆಗೂ ಹಾಗೂ ಜ್ಞಾನದಿಂದ ಜ್ಞಾನಕ್ಕೂ ಕೊಂಡೊಯ್ಯಲು ಉಪಯೋಗಿಸಿದ್ದಾನೆ. ನಾವು ಕಲಿಯತಕ್ಕ ಪಾಠವೇನಂದರೆ, ನಮ್ಮ ಕರ್ತನು ತನ್ನ ಕಾರ್ಯವನ್ನು ನಿರ್ವಹಿಸಲಿಕ್ಕೆ ಪೂರಾ ಸಮರ್ಥನಾಗಿದ್ದಾನೆ ಎಂತಲೂ ನಾವು ಮಾನವ ಪ್ರತಿನಿಧಿಗಳನ್ನು ಕರ್ತನ ಮೂಲಕ ನೋಡಿ ನಾವು ಅವರ ಜ್ಞಾನ ಮತ್ತು ಶಕ್ತಿಯಲ್ಲಿ ವಿಶ್ವಾಸವನ್ನಿಡದೆ, ಕರ್ತನು ತನ್ನ ಜ್ಞಾನದಿಂದ ಹಾಗೂ ಬಲದಿಂದ ಅವರನ್ನು ನಮ್ಮ ಉಪಯೋಗಕ್ಕೆ ನಡಿಸುತ್ತಿರುವನು ಎಂಬುದರ ಮೇಲೆ ವಿಶ್ವಾಸವಿಡಬೇಕಾಗಿದೆ-Z ’02, 284 (ಖ 3077).

*    *    *

ಡಿಸೆಂಬರ್ - 28

(ಒಡೆಯನು) ದಾರಿಯಲ್ಲಿ ಹಳ್ಳದ ನೀರು ಕುಡಿದು ತಲೆ ಎತ್ತುವನು. -ಕೀರ್ತನೆ 110:7

ನಮ್ಮ ಕರ್ತನೂ, ನಾಯಕನೂ, ಗುರುವೂ ಆಗಿರುವಾತನನ್ನು ನಾವು ಬೇಡವುದೇನಂದರೆ, ನಮ್ಮನ್ನು ಹೆಚ್ಚು ಹೆಚ್ಚಾಗಿ ಆಶೀರ್ವದಿಸಿ, ನಾವು ನಂಬಿಗಸ್ತರಾಗಿ ಹೊಸ ಹುರುಪಿನಿಂದ ಸಂತೋಷವುಳ್ಳವರಾಗಿ ಕರ್ತನ ಅನುಭವಗಳಿಂದ ತುಂಬಿದ ಹಳ್ಳದ ನೀರನ್ನು ಕುಡಿದು, ಜ್ಞಾನವನ್ನು ಪಡೆದವರಾಗಿ ನಾವು ಇದರಿಂದ ಆತನ ಸೇವೆ ಮಾಡಲು ತಯಾರಾಗಿ, ಸಮರ್ಥರಾಗಿ ಬರಬರುತ್ತಾ ಇನ್ನೂ

ಹೆಚ್ಚಾಗಿ ಸೇವೆ ಸಲ್ಲಿಸಲು ನಮ್ಮನ್ನು ಸಿದ್ಧರನ್ನಾಗಿ ಮಾಡಲು, ಈಗಿನ ಕಾಲದಲ್ಲೂ ಸೇವೆ ಮಾಡುವದಲ್ಲದೆ, ಆತನ ಕೃಪೆಯ ದೆಸೆಯಿಂದ ನಮಗೆ ಸಂಭವಿಸುವ ಪರೀಕ್ಷಾ ಸಂದರ್ಭಗಳು ಹಾಗೂ ನಮ್ಮ ಜೀವಿತದಲ್ಲಾಗುವ ದೈವ ಘಟಿತ ಬದಲಾವಣೆಗಳ ಬಗ್ಗೆ ನಾವು ನಮ್ಮ ದೇಹದಿಂದಲೂ, ಆತ್ಮದಿಂದಲೂ ನಮ್ಮ ಕರ್ತನನ್ನು ಮಹಿಮೆಪಡಿಸೋಣ. ಯಾಕಂದರೆ, ಸಮಸ್ತವೂ ಆತನದೆ ಆಗಿದೆ. ನಾವು ನಮ್ಮ ಕರ್ತನ ಅನುಭವಗಳೆಂಬ ತೊರೆಗಳಲ್ಲಿ ಪಾನ ಮಾಡುವಾಗ, ಚಿಕ್ಕ ಚಿಕ್ಕ ಹಕ್ಕಿಗಳು ನೀರು ಕುಡಿಯುವಾಗ ಪದೇ ಪದೇ ತಮ್ಮ ತಲೆಯನ್ನು ಮೇಲಕ್ಕೆತ್ತಿ ದೇವರಿಗೆ ಕೃತಜ್ಞತೆಗಳನ್ನು ಅರ್ಪಿಸುವಂತೆ, ಈ ಪಾಠವನ್ನು ಕಲಿತು ನಮಗೆ ಸಂಭವಿಸುವ ಎಲ್ಲಾ ಪರೀಕ್ಷೆಗಳು ನಮ್ಮ ಆತ್ಮೀಯ ಅಭಿವೃದ್ಧಿಗಾಗಿ ಸಂಭವಿಸುತ್ತವೆ ಎಂಬುದಾಗಿ ಪರಿಗಣಿಸಿ, ನಾವು ನಮ್ಮ ನಮ್ಮ ತಲೆಗಳನ್ನು ಮೇಲಕ್ಕೆತ್ತಿ ದೇವರನ್ನು ಕೊಂಡಾಡೋಣ-Z '02, 14 (ಖ 2935).

*     *     *

ಡಿಸೆಂಬರ್ - 29

ಮುಂಜಾನೆ ಬೀಜ ಬಿತ್ತು, ಸಂಜೆಯ ತನಕ ಕೈದೆಗೆಯಬೇಡ, ಇದು ಸಫಲವೋ, ಅದು ಸಫಲವೋ, ಒಂದು ವೇಳೆ ಎರಡು ಚೆನ್ನಾಗುವವೋ? ನಿನಗೆ ತಿಳಿಯದು. -ಪ್ರಸಂಗಿ 11:6

ಎಲ್ಲಾ ಕರ್ತನ ಜನರು, ಸತ್ಯದ ಸೇವಕರಾಗುವದಕ್ಕೆ ಯಾವ ಪ್ರಮಾಣದಲ್ಲಿ ಇಷ್ಟವುಳ್ಳವರಾಗಿರುವರೋ, ಅದೇ ಪ್ರಮಾಣದಲ್ಲಿ ಅವರು ಸದಾ ಎಚ್ಚರಿಕೆಯಿಂದಿದ್ದು, ಸತ್ಯದ ಪರವಾಗಿ ಸೇವೆ ಮಾಡುವ ಅವಕಾಶಗಳನ್ನು ನಿರೀಕ್ಷಿಸುವವರಾಗಿ ಕರ್ತನ ನಡೆಸುವಿಕೆ ಹಾಗೂ ಆತನು ತಮ್ಮನ್ನು ಉಪಯೋಗಿಸಿಕೊಳ್ಳಲು ಕಾತುರರಾಗಿ ಕಾಯಬೇಕು. ನಾವು ದೇವರ ಬಗ್ಗೆ ಭಕ್ತಿಯನ್ನು ಹಾಗೂ ಆತನ ವಾಕ್ಯವನ್ನು ತಿಳಿಯಲು ಕಾತುರರಾಗಿರುವವರನ್ನು ನೋಡಿದಲ್ಲಿ, ಅವರಿಗೆ ನಾವು ಹಸ್ತ ಚಾಚಿ ಸಹಾಯ ನೀಡಬೇಕು. ಹಾಗೆಯೇ, ನಮಗೆ ದೊರಕಿರುವ ಆಶೀರ್ವಾದವನ್ನು ಅವರಿಗೂ ವರ್ಗಾವಣೆ ಮಾಡಲು ಕಾತುರರಾಗಿದ್ದು, ಕರ್ತನಿಗಾಗಿ ಪ್ರತಿಷ್ಠೆಪಡಿಸಿಕೊಂಡಿರುವ ನಾವು, ಇದು ನಮ್ಮ ಮುಖ್ಯ ವ್ಯವಹಾರವೆಂದು ಎಣಿಸಿ ನಮ್ಮನ್ನು ನಾವು ರಾಜಾಧಿರಾಜನ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು-Z '02, 71 (ಖ 2964).

*     *     *

ಡಿಸೆಂಬರ್ - 30

ನಿನ್ನ ಕೃಪೆಯಿಂದ ಸಂವತ್ಸರಕ್ಕೆ ಸುಭಿಕ್ಷ ಕಿರೀಟವನ್ನು ಇಟ್ಟೆದ್ದೀ. -ಕೀರ್ತನೆಗಳು 65:11

ಈ ವರ್ಷದಲ್ಲಿ ದೇವರು ನಮ್ಮನ್ನು ನಡಿಸಿದ ರೀತಿಯನ್ನು ಅವಗಾಹನೆ ಮಾಡುವದಾದರೆ, ದೇವರ ಒಳ್ಳೆಯತನ ಮತ್ತು ಕರುಣೆಯು ನಮ್ಮ ನಂಬಿಕೆ, ವಿಶ್ವಾಸಗಳನ್ನು ಉತ್ತೇಜನಗೊಳಿಸಿ, ನಾವು ಇನ್ನೂ ಹೆಚ್ಚಿನ ರೀತಿಯಲ್ಲಿ, ಮುಂಬರುವ ವರುಷದಲ್ಲಿ, ಆತನ ಮೇಲೆ ವಿಶ್ವಾಸವನ್ನು ಇಡಲು ಇಂಬುಕೊಡುತ್ತದೆ. ದೇವರ

ಮಕ್ಕಳಾಗಿ ನಮ್ಮ ವಿಷಯದಲ್ಲಿ ದೇವರು ತೋರಿಸಿರುವ ಎಲ್ಲಾ ರೀತಿಯ ಆಶೀರ್ವಾದಗಳಿಗಾಗಿ ನಾವು ಆತನಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು.  ಹಾಗೂ ಇಡೀ ವರ್ಷದಲ್ಲಿ, ಹಾಗೂ ಮುಂಬರುವ ವರ್ಷದಲ್ಲಿಯೂ ನಮ್ಮನ್ನು ಆತನು ಸ್ಥಾಪಿಸುವ ರಾಜ್ಯದ ಕಡೆಗೆ ನಡೆಸುತ್ತಾನೆ ಎಂಬ ನಂಬಿಕೆಯನ್ನಿಟ್ಟು ಮುಂದುವರಿಯೋಣ.  ನಾವು ಮೊದಲು ದೇವರಲ್ಲಿ ನಂಬಿಕೆಯಿಟ್ಟ ಕಾಲಕ್ಕಿಂತ ಈಗ ನಾವು ದೇವರ ರಾಜ್ಯಕ್ಕೆ ಹತ್ತಿರವಾಗಿದ್ದೇವೆಂದು ತಿಳಿಯೋಣ.  ದೇವರು ನಮ್ಮಲ್ಲಿ ಪ್ರಾರಂಭಿಸಿರುವ ಈ ಒಳ್ಳೆಯ ಕಾರ್ಯವನ್ನು ಮುಂದುವರಿಸಿ ಅದನ್ನು ಪೂರ್ಣಗೊಳಿಸಲು ಇಚ್ಛೆಯುಳ್ಳವನಾಗಿದ್ದಾನೆ.  ಆದರೆ, ನಾವು ನಮ್ಮ ಚಿತ್ತ, ಜೀವನ ಮತ್ತು ಸರ್ವಸ್ವವನ್ನು ಆತನಲ್ಲಿರುವ ಜ್ಞಾನ ಮತ್ತು ಪ್ರೀತಿಯ ಪರಾಮರಿಕೆಗೆ ಒಪ್ಪಿಸಿದಲ್ಲಿ ಮಾತ್ರ ಸಾಧ್ಯವಾಗುತ್ತದೆ-Z ’00, 365 (ಖ 2737).

*     *     *

ಡಿಸೆಂಬರ್ - 31

ಯೆಹೋವನ ಮಹೋಪಕಾರಗಳಿಗೆ ಬದಲೇನು ಮಾಡಲಿ? ರಕ್ಷಣಾ ಪಾತ್ರೆಯನ್ನು ತೆಗೆದುಕೊಂಡು ಯೆಹೋವ ನಾಮವನ್ನು ಪ್ರಖ್ಯಾತಿಪಡಿಸುವೆನು.  ಯೆಹೋವನಿಗೆ ಹೊತ್ತ ಹರಕೆಗಳನ್ನು ಆತನ ಎಲ್ಲಾ ಜನರ ಮುಂದೆಯೇ ಸಲ್ಲಿಸುವೆನು.                                  ಕೀರ್ತನೆಗಳು 116:12-14

ವರ್ಷಾಂತ್ಯವು ಮುಂದಿನ ವರ್ಷದಲ್ಲಿ ನಡಕೊಳ್ಳುವ ಹೊಸ ಠರಾವುಗಳನ್ನು ಮಾಡಲು ಇದು ಒಂದು ವಿಶೇಷವಾದ ಸಂದರ್ಭವಾಗಿದೆ.  ಆದುದರಿಂದ, ಪ್ರಿಯ ಸಹೋದರರೇ, ಅನೇಕ ಒಳ್ಳೆಯ ಸಂಕಲ್ಪಗಳನ್ನು ಮಾಡುವದಲ್ಲದೆ, ಅವುಗಳನ್ನು ಸಾಧಿಸಬೇಕು.  ಕರ್ತನ ಜೊತೆಯಲ್ಲಿ ನಾವು ಚಿತ್ರೈಸಿ ಹಿಂಸೆಗಳನ್ನು ಹೇಗೆ ತಾಳಬೇಕು ಹಾಗೂ ಈ ಹೊಸ ವರ್ಷದಲ್ಲಿ ಕರ್ತನ ಕೃಪೆಯಿಂದ ಕರ್ತನಿಗಾಗಿ ಒಳ್ಳೆಯ ವರ್ಷವಾಗಿರುವಂತೆ ನಮ್ಮ ಜೀವಿತವು ಆತನಿಗಾಗಿ ಇನ್ನೂ ಹೆಚ್ಚಾಗಿ ಮೀಸಲಾಗಿಟ್ಟು, ಹೆಚ್ಚಿನ ನಿರೀಕ್ಷೆಯುಳ್ಳವರಾಗಿ, ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಂಡು ದೇವರ ಕೃಪೆಯಿಂದ ಅದನ್ನು ಕರ್ತನು ಮೆಚ್ಚುವ ರೀತಿಯಲ್ಲಿ ನಿರ್ವಹಿಸುವದಕ್ಕೂ ಹಾಗೂ ಪ್ರಪಂಚವನ್ನು ಗೆಲ್ಲಲು ನಮ್ಮ ದೇಹದ ಆಶೆಗಳನ್ನು ವಿಸರ್ಜಿಸಿ ಸೈತಾನನ್ನು ಎದುರಿಸಿ ಕ್ರಿಸ್ತನು ಅನುಗ್ರಹಿಸುವ ಬಲವನ್ನು ಆಶ್ರಯಿಸಿಕೊಂಡು ದೇವರನ್ನು ಘನಪಡಿಸುತ್ತಾ ಕರ್ತನ ಜನರಿಗೆ ಆಶೀರ್ವಾದದಾಯಕವಾಗಿ ಇರುವಂತೆ ನಮ್ಮ ಸಂಕಲ್ಪವನ್ನು ಕಾರ್ಯರೂಪಕ್ಕೆ ತರೋಣ-Z ’99, 286 (ಖ 2551).